ಸಾಹಿತ್ಯ ದಾಸೋಹ ೧೮೩

ಸಮನ್ವಯ ಸಮಿತಿ — **ಕನ್ನಡವೇ ಸತ್ಯ**

ನೋಡಿಯೋ ಸಾಹಿತ್ಯ ದಾಸೋಹ

ದಾಸೋಹದಲ್ಲಿ ಸದಸ್ಯರು
ಪ್ರಸ್ತುತಿ ಪಡಿಸಿದ
ಪ್ರಸ್ತುತಿಗಳ
ಮುದ್ರಣ ರೂಪ

ಶನಿವಾರ, ೧೦ ಅಕ್ಟೋಬರ್ ೨೦೨೦

ಸಾಹಿತ್ಯ ದಾಸೋಹ 183

ಪ್ರಸ್ತಾವನೆ

ದಿನಾಂಕ ೧೦.೧೦.೨೦೨೦ ಶನಿವಾರ ಸಂಜೆ ೪ ಗಂಟೆಗೆ ಕಾರ್ಯಕ್ರಮ ಆರಂಭವಾಯ್ತು.
ಶ್ರೀ ಹು.ವಾ ಶ್ರೀಪ್ರಕಾಶ್ ರವರು ಸ್ವಾಗತಿಸಿ ,ಕಾರ್ಯಕ್ರಮದ ಅಧ್ಯಕ್ಷರನ್ನು ಪರಿಚಯಿಸಿದರು.
ದಾಸೋಹದ ಅಧ್ಯಕ್ಷತೆಯನ್ನು ಕವಯಿತ್ರಿ,ಪ್ರಬಂಧಕಾರರು,ವಿಜ್ಞಾನ ಬರಹಗಾರರೂ,ಅಂಕಣಕಾರರೂ ಆದ ಶ್ರೀಮತಿ ಜಿ.ವಿ ನಿರ್ಮಲಾರವರು ವಹಿಸಿದ್ದರು. ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್.ಮಹಾಬಲರವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಹತ್ತೊಂಬತ್ತು ಜನ ದಾಸೋಹಿಗಳು ಕತೆ,ಕವನ,ಪ್ರಬಂಧ,ಗಾಯನ,ಲೇಖನ ಹೀಗೆ ವಿಭಿನ್ನ ಪ್ರಸ್ತುತಿ ಗಳನ್ನು ಆರು ನಿಮಿಷಗಳ ಸಮಯದ ಮಿತಿಯಲ್ಲಿ ಮಂಡಿಸಿದರು. ೩೯ ಜನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಅಧ್ಯಕ್ಷರು ಎಲ್ಲರ ಪ್ರಸ್ತುತಿಗಳ ಉತ್ತಮ ಅಂಶದ ಬಗ್ಗೆ ಮೆಚ್ಚುಗೆ ಮತ್ತು ಪ್ರೋತ್ಸಾಹದ ನುಡಿಗಳನ್ನಾಡಿ,ತಮ್ಮ ಒಂದು ಕವನ ವಾಚಿಸಿದರು.
ಕಾರ್ಯಕ್ರಮದ ನಡುವೆ ಸಾಹಿತ್ಯ ದಾಸೋಹ ೧೮೨
ಪಿ.ಡಿ.ಎಫ್ ಪ್ರತಿಯನ್ನು ಬಿಡುಗಡೆ ಮಾಡಲಾಯ್ತು. ಶ್ರೀಮತಿ ಶ್ರವಣಕುಮಾರಿ ಯವರು ವಂದನಾರ್ಪಣೆ ಮಾಡಿದರು.
ಶ್ರೀ ಎಚ್ ಎಲ್ ಗುರುಪ್ರಸಾದ್ ಮತ್ತು ಶ್ರೀ ಗುರುರಾಜ ಶಾಸ್ತ್ರಿಯವರು ಕಾರ್ಯಕ್ರಮದ ತಾಂತ್ರಿಕ ನಿರ್ವಹಣೆ ಮಾಡಿದರು.

-ಹುವಾಶ್ರೀ
ಸಂಚಾಲಕ ಸಮಿತಿಯ ಪರವಾಗಿ

ಪರಿವಿಡಿ

ಸರ್ವಶ್ರೀ

ಜಿ.ವಿ.ಅರುಣ	ಚೆಂಗನ ಮರಣೋತ್ತರ ಪ್ರಶಸ್ತಿ - ಹಾಸ್ಯ ಲೇಖನ
ಮಹಾಬಲ	ವಿ. ಸೀತಾರಾಮಯ್ಯ - ಕವನ
ಶ್ರೀಮತಿ ಗೌರೀ ಭಟ್	ಅಲೆಮಾರಿ ಬದುಕು - ಕವನ
ಶ್ರೀಮತಿ ಶ್ರವಣಕುಮಾರಿ	ಜ್ಯೋತಿಷ್ಯ ಫಲ - ಲೇಖನ
ಗುರುರಾಜ ಶಾಸ್ತ್ರಿ	ಹಳೆಯ ನೆನಪು - ಲೇಖನ
ಶ್ರೀಮತಿ ರಾಧಿಕಾ ಜಿ	ಅಂತರ್ಯದ ಕಲೆಗಳು - ಕವನ
ಶ್ರೀಮತಿ ನಾಗರತ್ನಾ ಚಂದ್ರಶೇಖರ್	ಹೇಳದೇ ಉಳಿದ ಮಾತುಗಳು - ಲೇಖನ
ಶ್ರೀಮತಿ ಜಿ.ವಿ.ನಿರ್ಮಲಾ	ಕಣ್ಮಣಿ - ಕವನ
ವಿಠಲ್ ಇಜೇರಿ	ನಗೆ ಕಿಡಿಗಳು - ಲೇಖನ
ಗುಹಾ	ಅಸ್ಪೃಶ್ಯತೆ - ಸಂಪಾದಿತ ಪ್ರಬಂಧ
ಶ್ರೀಮತಿ ಸಾವಿತ್ರಿ ನಾಗರಾಜ್	ಶಂಕರಾ ಆದಿ ಶಂಕರಾ - ಸ್ತೋತ್ರ
ಎಚ್ ವಿ ಶ್ರೀಪ್ರಕಾಶ್	ಅಡ್ಡಂ ದಿಡ್ಡಂ ಪಾಯಾ ಪರಂಗಿ - ಲೇಖನ
ಶ್ರೀಮತಿ ಮಾಲತಿ ಶ್ರೀನಿವಾಸನ್	ಮೆಲ್ಲಾನೆ ನಡೆಯಬೇಕಮ್ಮ - ಕವನ
ಶ್ರೀಮತಿ ಮಂಗಳಾ ನಾಡಿಗ್.	ಬಾರೇ ಬ್ರಹ್ಮನ ರಾಣಿ - ಸ್ತೋತ್ರ
ಡಿ ಬಿ ಪ್ರಾಣೇಶ ರಾವ್	ಕಿರಿಕಿರಿಯ ಕರೆಗಳು
ಶ್ರೀಮತಿ ಶೀಲಾ ಅರಕಲಗೂಡು	ಕಾರ್ಯಕಾರಣ ಸಂಬಂಧ
ಶ್ರೀಮತಿ ರೇಣುಕಾ ದೇಸಾಯಿ	**ದೇವನಲ್ಲಿ ಪ್ರಶ್ನೆ**

ಚೆಂಗನ ಮರಣೋತ್ತರ ಪ್ರಶಸ್ತಿ

(ಚೆಂಗನ ಐಡಿಯಾದಲ್ಲಿ ರೂಪುಗೊಂಡ ಪ್ರಶಸ್ತಿಯ ರೂಪರೇಷೆಯೇ ಬೇರೆ!)
“ಸಾ… ಅಂತ ಕೂಗಿ, ಢಬ್ ಡಬ್ ಅಂತ ಬಾಗಿಲ ಮೇಲೆ ಬಡಿದ ಶಬ್ದ ಕೇಳಿ ಚೆಂಗ ಬಂದ ಅಂತ ಗೊತ್ತಾಯ್ತು. ಬಾಗಿಲು ತೆಗೆಯುವವರೆಗೂ ಸುಮ್ಮನಿರದೆ ಬಡೀತಾನೇ ಇರೋ ಆಸಾಮಿ ಆದ್ದರಿಂದ ಓಡಿಹೋಗಿ ಬಾಗಿಲು ತೆಗೆದೆ.

'ನಂಸ್ಕಾರ ಸಾ… ಬಾಗಿಲು ತೆಗ್ಯೋದು ಲೇಟಾಯ್ತಲ್ಲ, ಇದೀರೋ ಇಲ್ವೋ ಅಂತಿದ್ದೆ…'

'ಒಳಗಿನಿಂದ ಬಂದು ಬಾಗಿಲು ತೆಗೀಬೇಕಲ್ಲ ಚೆಂಗಾ…' ಅಂತ ಅವನ ಕೈಲಿ ಬಡಿಸಿಕೊಂಡಿದ್ದ ಬಾಗಿಲನ್ನು ಕನಿಕರದಿಂದ ನೋಡಿದೆ.
'… ಕಾಲಿಂಗ್ ಬೆಲ್ ಇತ್ತಲ್ಲ ಚೆಂಗ…'

“ಅದಿದ್ರೆ ಸಾಕಾ ಸಾ… ಕರೆಂಟ್ ಇರ್ತದೆ ಅಂತ ಏನು ಗ್ಯಾರಂಟಿ…?”

“ಅದೂ ಸರಿ… ಪಾಪ ಮಂತ್ರಿಗಳೇ ಹೇಳಿದಾರಲ್ಲ ಏನು ಬೇಕಾದ್ರು ಸರಿ ಮಾಡಬಹುದು, ಈ ಕರೆಂಟ್ ಒಂದನ್ನ ಬಿಟ್ಟು ಅಂತ…'

'ಐ… ಬುಡಿ ಸಾ… ಮೇನ್ ಸ್ವಿಚ್ ಇರೋದೇ ಡೆಲ್ಲಿನಾಗೆ… ಇಲ್ಲಿ ಎಷ್ಟು ಸ್ವಿಚ್ ಒತ್ತಿದರೂ ಅಷ್ಟೇಯ…'

'ಒಳಗೆ ಬಾ ಚೆಂಗ… ಏನು ಸಮಾಚಾರ ಬೆಳಗ್ಗೆ ಅಷ್ಟು ಹೊತ್ತಿಗೇ ಬಂದಿದೀಯಾ…?”

'ಒಂದ್ವಿಸಯದ ಬಗ್ಗೆ ನಿಮ್ಮ ಸಲಹೆ ಕೇಳ ಬೇಕಾಗಿತ್ತು ಸಾ…'

“ಸಂತೋಷ ಚೆಂಗ… ನನ್ನ ಮೇಲೆ ಇನ್ನೂ ವಿಶ್ವಾಸ ಇಟ್ಟುಕೊಂಡಿದೀಯಲ್ಲ. ಅಷ್ಟೇ ಸಾಕು' ಅಂದೆ.

“ನಂಗೂ ಈಗ ನಲ್ವತ್ತೈದು ವರ್ಸ ಆಯ್ತಾ ಆಯ್ತೆ ಸಾ… ನಿಮ್ಗೆ ಗೊತ್ತಲ್ಲ , ಎಂತೆಂತ ಸೋಸ್ಯಲ್ ಸರ್ವಿಸ್ ಮಾಡಿವ್ನಿ ಅಂತ… ಅದ್ಕೆ ಸನ್ಮಾನ ಮಾಡ್ಸಿ ಕೊಳೋಮಾ ಅಂತ ಮಾಡಿವ್ನಿ"

'ಇದೊಳ್ಳೆ ಚೆನ್ನಾಗಿದೆ ಚೆಂಗ!… ಬೇರೆ ಯಾರಾದರೂ ನೀನು ಮಾಡಿರೊ ಮಹತ್ಕಾರ್ಯಗಳನ್ನ ಗುರುತಿಸಿ ಅವರೇ ಸನ್ಮಾನ ಮಾಡಬೇಕು… ಅದು ಬಿಟ್ಟು ನೀನೇ ಸನ್ಮಾನ ಮಾಡ್ಸಿ ಕೊಳ್ಳೋಣಾ ಅಂದ್ರೆ ಹ್ಯಾಗೆ… ಎಲ್ಲೋ ಎಡವಟ್ಟಾದ ಹಾಗೆ ಅನ್ಸುತ್ತೆ…'

“ನೀವೂ ಸರಿ ಸಾ… ಯಾವ ಸತಮಾನದೋರು ಸಾ ನೀವು…? ನಾವು ಸುಮ್ಕಿದ್ರೆ ನಿಮ್ತರಾನೇ ಇರ್ಬೇಕಾಯ್ತದೆ… ನಮ್ಮ ತುತ್ತೂರಿ ನಾವಲ್ದೆ ಬೇರೆ ಯಾರೋ ಯಾಕೆ ಊದ್ತಾರೆ ಸಾ…
ಅದಿರ್ಲಿ, ಈಗಾಗ್ಲೇ ಎಲ್ಡು - ಮೂರು ಸಂಘದೋರು ಒಪ್ಕೂಂಡವ್ರೆ… ಅವ್ರಲ್ಲ ಒಟ್ಗೆ ಸನ್ಮಾನ ಮಾಡೋದೋ, ಇಲ್ಲ ಬೇರೆ ಬೇರೆ ಮಾಡೋದೊ ಅಂತ ನಾನೇ ಡಿಸೈಡ್ ಮಾಡ್ಬೇಕು…'

'ಇದೆಲ್ಲ ನನಗೆ ಗೊತ್ತಾಗುವುದಿಲ್ಲ ಚೆಂಗ... ನಿನಗೆ ಸನ್ಮಾನ ಆಗೋ ದಿನ ಹೇಳು... ಬಂದು ನೋಡಿ ಸಂತೋಷಪಡ್ತೀನಿ...'

'ಈಗ ನಾನು ಬಂದಿದ್ದು ಯಾಕೆ ಅಂದ್ರೆ... ನನ್ನ ಸನ್ಮಾನದ ಜೊತೆಗೆ ನನ್ನ ಎಸ್ರು ಪರ್ಮನೆಂಟಾಗಿ ಉಳಿಯೋ ಹಂಗೆ ನನ್ನ ಎಸ್ರಲ್ಲಿ ಪ್ರತಿ ವರ್ಸಾನು ಒಂದೊಂದು ಪ್ರಸಸ್ತಿ ಕೊಡೋಮಾ ಅಂತ ಮಾಡ್ಕೊಂಡಿವ್ನಿ... ಅದನ್ನ ನನ್ನ ಸನ್ಮಾನದ ದಿನ ಅನೌನ್ಸ್ ಮಾಡ್ತೀನಿ...'

'ಒಳ್ಳೆ ಕೆಲ್ಸ ಚೆಂಗ... ಯಾವುದಕ್ಕೆ ಪ್ರಸಸ್ತಿ ಯಾರಿಗೆ. ಕೊಡೋದು? ಅವರನ್ನ ಯಾರು ಸೆಲೆಕ್ಟ್ ಮಾಡ್ತಾರೆ?...'

"ಐ ... ಇದೊಳ್ಳೆ ಸೆಂದಾಗಾಯ್ತು... ನಾ ನಿಮ್ತಾವ ಬಂದದ್ದೇ ಈ ಇಚಾರ ಕೇಳಾಮಾ ಅಂತ... ನೀವೆ ನಂಗೆ ರಾಂಗ್ ಕೊಶ್ಚನ್ ಕೇಳಿದ್ರೆ...?"

"ಸರಿ... ಮೊದಲು ಇದು ಹೇಳು... ಪ್ರಶಸ್ತಿ ಅಂತ ಏನು ಕೊಡ್ತಿ...? ಒಂದು ಲಕ್ಷ ನಗದೋ ಇಲ್ಲ ಚಿನ್ನದ ಪದಕಾನೋ?"

'ಅವೆಲ್ಲಾ ಕೊಡೋ ಹಾಗಿದ್ರೆ ಪ್ರತಿ ವರ್ಸಾನು ನಾನೇ ಪ್ರಸಸ್ತಿ ತೊಗೋತಿದ್ದೆ ಸಾ... ಅವೆಲ್ಲ ಏನೂ ಇಲ್ಲ... ಪ್ರಸಸ್ತಿ ಅಂತ ಒಂದು ಸಾಲು ಹೊದ್ಸಿ, ಆರ ಆಕಿ ಒಂದಷ್ಟು ಸೀಬೆ-ಬಾಳೆ ಕೈನಾಗೆ ಮಡಗೋದು ಅಷ್ಟೇಯ... ಒಂದೊಂದು ವರ್ಸ ಒಂದೊಂದು ಅಸೋಸಿಯೇಸನ್ನೋರು ಸಮಾರಂಬ ನಡೆಸ್ತಾರೆ... ಅವ್ರ ಕೈಲಾದ್ರೆ ಒಂದು ಚಿಕ್ಕ ಇತ್ತಾಳೆ ತಟ್ಟೆ ಕೊಟ್ಟಾರು ಅಸ್ಟೇಯ... ಈಗ ವಸಿ ಯೋಳಿ ಯಾವ ತರ ಮಾಡಮಾ ಅಂತ...'

'ಈ ರೀತಿ ಪ್ರಶಸ್ತಿ ಸ್ವೀಕರಿಸೋಕ್ಕೆ ಈಗ ಯಾರೂ ಒಪ್ಕೊಳ್ಳೋದಿಲ್ಲ ಚೆಂಗ...'

"ಸರಿಹೋಯ್ತು... ಸಲಹೆ ಕೇಳಾಕ್ಕೆ ಬಂದ್ರೆ ಬುಡನೆ ಕಡಿದುಬಿಟ್ರಲ್ಲಾ ಸಾ.. ಓಗ್ಲಿ ಬುಡಿ... ನಾನೇ ಯೋಚ್ನೆ ಮಾಡ್ಕತೀನಿ...' ಎಂದು ಹೇಳಿ ಹೊರಟ ಚೆಂಗ.

ಅಂದು ರಾತ್ರೆಯೇ ಚೆಂಗ ನನಗೆ ಫೋನ್ ಮಾಡಿ ವಿಷಯ ತಿಳಿಸಿದ.
"ಸಾ... ಸತ್ತೋದ್ಮ್ಯಾಕೆ ಪ್ರಸಸ್ತಿ ಕೊಡ್ತಾರಲ್ಲ ಅದ್ಕೇನಂತಾರೆ ಸಾ...?"

" 'ಮರಣೋತ್ತರ ಪ್ರಶಸ್ತಿ' ಅಂತಾರೆ ಚಂಗ... ಯಾಕೆ...? "
"ಸಖತ್ತಾಗೈತೆ ಸಾ ಎಸ್ರು... 'ಚಂಗನ ಮರಣೋತ್ತರ ಪ್ರಸಸ್ತಿ' ಅಂತ ಎಸ್ರು ಮಡಗ್ತೀನಿ ಸಾ... ಈ ಪ್ರಸಸ್ತಿ ಸತ್ತೋಗಿರೋರ್ಗೆ ಮಾತ್ರ ಕೊಡೋದು. ಆಗ ಅವ್ರು ಒಪ್ಕೊಳೋದು - ಬಿಡೋದು ಪ್ರಸ್ನೇನೆ ಬರಾಕಿಲ್ಲ ಸಾ... ಲಕ್ಸ ಚಿನ್ನದ ಪದ್ಕ ಅಂತ ಮಾತೇ ಇರೋಲ್ಲ... ಸತ್ತೋಗಿರೋರ ಮನೆಯೋರು ಯಾರಾದ್ರು ಬಂದ್ರೆ ಅವ್ರಿಗೇ ಕೊಡೋದು. ಇಲ್ಲದಿದ್ರೆ ಅವರ ಪರವಾಗಿ ನಿಮ್ಮಂತೋರು ಯಾರ್ಗಾದ್ರು ಕೊಟ್ಟು ತಲುಪಿಸಿಬಿಡಿ ಅನ್ನೋದು... ಎಂಗದೆ ನನ್ನ ಐಡಿಯಾ...?'
'ಏನೋಪ್ಪ...' ಚೆಂಗನ ಮರಣೋತ್ತರ' ಅಂದ್ರೆ ! ...'

"ಅಂದ್ರೂ ಇಲ್ಲ, ಏನೂ ಇಲ್ಲ ಸಾ... ನೋಡ್ತಾ ಇರಿ ಅದು ಜನಗಳಿಗೆ ಹ್ಯಾಗೆ ಕ್ಯಾಚ್ ಆಗ್ತದೆ ಅಂತ... ಅಂದಂಗೆ ಮೊದಲ ವರ್ಸದ ಮರಣೋತ್ತರ ಪ್ರಸಸ್ತಿ ಸ್ವೀಕರಿಸೋಕ್ಕೆ ನೀವೇ ಬರ್ಬೇಕು ಸಾ... ಯಾರ್ಗೆ ಕೊಡೋದು ಅಂತ ಡಿಸೈಡ್ ಮಾಡ್ಬೇಕು... ನಾಳೆ ಒತ್ಗೆ ಈಗಾಗ್ಲೆ ಸತ್ತಿರೋರ ಎಸರೆಲ್ಲ ಪಟ್ಟಿ ಮಾಡಿಟ್ಟಿರಿ ಸಾ... ನಾನು ಬೆಳ್ಗೆ ಅತ್ತು ಗಂಟೆಗೇ ನಿಂ ಮನೆ ತಾವ ಬತ್ತೀನಿ...'

ನಾನು ಮಾತನಾಡುವ ಮೊದಲೇ ಚೆಂಗ ತನ್ನ ಕೈಲಿದ್ದ ಫೋನನ್ನು ಕುಕ್ಕಿದ್ದ.

ಜಿ.ವಿ.ಅರುಣ

ವಿ. ಸೀತಾರಾಮಯ್ಯ

ಕನ್ನಡಕದೊಳಗಿನ ಮೆಲುನೋಟ:ಜರಿಯಿಲ್ಲದ ಮೈಸೂರು ಪೇಟ
ಲಾರ್ಡ್ ಕೀನ್ಸ್ ಒಡನೆ ವಿತ್ತನೀತಿ ಚರ್ಚಿಸಿದ ಮಹಾಧೀಮಂತ.
ಕನ್ನಡವನೂ ಇಂಗ್ಲಿಷಿನಲೇ ಬೋಧಿಸಿದ ಅಪರೂಪದ ಪಂಡಿತ
ಅಂದು ಇವರ ಮನೆಯೆಂದರೆ ಎಲ್ಲ ಸಾರಸ್ವತಗಣ್ಯರ ಹೂದೋಟ.

ಗ್ರಂಥಸಂಪಾದಕ, ವ್ಯಕ್ತಿಚಿತ್ರಕಾರ, ಸಂಗೀತದಲೂ ರುಚಿ ಇದ್ದ ರಸಿಕ
ದ್ರಾಕ್ಷಿ-ದಾಳಿಂಬೆ,ಅರಲು-ಬರಲುಹೆಜ್ಜೆಗಳು ಎಷ್ಟೊಂದು ಗೀತ,ಕವನ?
ನಾಟಕಕಾರರಾಗಿಯೂ ಪ್ರಸಿದ್ಧ, ಅದೋ ಅಲ್ಲುಂಟು ಶ್ರೀಶೈಲ ಶಿಖರ.
ಇವರ ಪಂಪಾಯಾತ್ರೆ ಕೃತಿಯಲ್ಲವೆ?ಕನ್ನಡದ ಮೊದಲ ಪ್ರವಾಸಕಥನ ?

ಇವರಾದರು ಮಲ್ಲಿಗೆಯ ಕವಿಗಳಿಗೆ ನಿಜ ಮಾರ್ಗದರ್ಶಕರು.
ಮೆಚ್ಚಿದಜನ ಬಣ್ಣಿಸಿದರು ಇವರಲ್ಲವೇ ಅಂದಿನ ಕೃಷ್ಣಾರ್ಜುನರು.
ಇಂದಿಗೂ ಹಳಬರು ಮರೆತಿಲ್ಲ ಕವಿಯ ಹೆಣ್ಣೊಪ್ಪಿಸುವ ಹಾಡು ,
ಕಾಡಿನ ಮೌನವನು ಸೀಳಿ ಬಂದ ಅಭೀಃ ಎಂಬ ಮೊಳಗು.

ಮಹಾತ್ಮರು ಹುಟ್ಟಿದ ದಿನದಂದೇ ಈ ಕವಿಯದೂ ಜನನ
ಗೌಜಿನ ನಡುವೆ ಈ ಮೌನಿಯನೂ ನೆನೆಯಬೇಕಿದೆ ಜನ

ಮಹಾಬಲ

ಅಲೆಮಾರಿ ಬದುಕು

ಉದರ ನಿಮಿತ್ತಕ್ಕೆ ಆರಿಸಿಕೊಂಡ ನೌಕರಿಯಿಂದ ಬದುಕಾಯಿತು ಅಲೆಮಾರಿ

ಊರು ಯಾವುದೆಂದರೆ ಹೆತ್ತೂರೋ,ಹೊತ್ತೂರೋ ಹೇಳಲಾರೆ.

ವರ್ಗಾವಣೆ ಯೊಂದಿಗೆ ಊರಿಂದೂರಿಗೆ ಎತ್ತಂಗಡಿ

ಅಲ್ಲಿದೆ ಮನೆಯೆಂದು ಇಲ್ಲಿ ಅನ್ಯರ ಮನೆಯೇ ನನ್ನ ಗುಡಿ.

ಇದೇ ನನ್ನೂರು ಎಂದು ಅಪ್ಪಿಕೊಂಡರೂ, ಒಪ್ಪಿಕೊಳ್ಳದ ಮನಸು

ಯಾವಾಗಲೂ ಬಿಡದೇ ಕಾಡುವ ನನ್ನ ಪ್ರೀತಿಯ ಹುಟ್ಟೂರ ಕನಸು.

ಬೇರೆಯವರು ತೋರಿಸುವ ಪ್ರೀತಿಯಲಿ ಕಾಣುವ ನನ್ನಮ್ಮ

ಅವರು ತೋರುವ ಕಾಳಜಿಯಲ್ಲಿ ಸಿಗುವ ಅಮ್ಮಮ್ಮ.

ಮೊದಲಿನ ಸೊಗಸಿಲ್ಲ, ಸೊಗಡಿಲ್ಲ ನನಗೆ ನನ್ನೂರಲಿ

ಆದರಿಲ್ಲಿಯೂ ಸುಖ ಪಡಲಾರೆ ಆ ಹಳೆಯದೇ ನೆನಪಲಿ.

ಶ್ರುತಿ ಇಲ್ಲದ ಹಾಡಿನಂತಾಯಿತು ನನ್ನ ಅಲೆಮಾರಿ ಬದುಕು.

ಸದಾ ನನ್ನನ್ನು ಕಾಡಿ, ಆಗದೆಂದೂ ಊರಿನ ನೆನಪು,ಮಸುಕು.

ಈ ಊರ ಮಂಚದಲಿ ನನ್ನೂರ ಕನಸು ಕಾಣುತಿರುವೆ

ಇಲ್ಲಿಂದಲೇ ಊರಿನ ಅಂದ ,ಚಂದ ಸವಿಯುತಿರುವೆ.

ಗೌರಿ ಭಟ್ಟ.

ಜ್ಯೋತಿಷ್ಯ ಫಲ

ಹೊಸಹಳ್ಳಿಯ ಕಂಠೀಜೋಯಿಸರು ಅವರ ಊರಲಲ್ಲದೆ ಸುತ್ತಮುತ್ತಲ ಐವತ್ತು ಮೈಲು ಫಾಸಲೆಯಲ್ಲೇ ಹೆಸರುವಾಸಿ. ಹುಟ್ಟಿದ ಮಗುವಿನ ಜಾತಕ ಬರೆಸುವುದರಿಂದ ಹಿಡಿದು ಸತ್ತ ಘಳಿಗೆಯ ನಕ್ಷತ್ರ ಕೇಳುವವರೆಗೂ ಬಹಳಷ್ಟು ಜನರಿಗೆ ಅವರ ಶಂಖದಿಂದ ಬಂದಾಗಲೇ ತೀರ್ಥ. ಬರೀ ಜಾತಕ, ನಕ್ಷತ್ರಗಳಲ್ಲದೆ ದನ, ಧನ-ಕನಕ ಇಂತಹ ಮೌಲ್ಯಯುತವಾದ ಜೀವ, ನಿರ್ಜೀವ ವಸ್ತುಗಳನ್ನು ಕಳೆದುಕೊಂಡಾಗಲೂ ಪ್ರಶ್ನೆ ಕೇಳಲು ಬರುತ್ತಿದ್ದರು. ಹಾಗೆಯೇ ಅವರ ಉತ್ತರದಿಂದ ಪ್ರಯೋಜನವಾಯಿತು ಎನ್ನುವುದನ್ನೂ ಒಪ್ಪಿಕೊಂಡಿದ್ದರು. ಮದುವೆ, ಮುಂಜಿ, ಸೀಮಂತ, ನಾಮಕರಣ ಇಂತಹ ಯಾವುದಕ್ಕಾದರೂ ಅವರಿಟ್ಟ ಘಳಿಗೆ ಗಟ್ಟಿ ಮುಹೂರ್ತವೆಂಬ ನಂಬಿಕೆಯು ಜನಜನಿತವಾಗಿತ್ತು.

ಇಷ್ಟೆಲ್ಲಾ ಪ್ರವರಗಳನ್ನು ಅವರ ಬಗ್ಗೆ ಏಕೆ ಹೇಳುತ್ತಿದ್ದೀನೆಂದರೆ ಅದೇ ಊರಿನ ನರಸಿಂಹ ಮೂರ್ತಿಯವರೂ ಜೋಯಿಸರೂ ಪರಮಾಪ್ತರಾಗಿದ್ದು ಇಬ್ಬರ ಮಧ್ಯೆ ಹೋಗೋ ಬಾರೋ ಸಂಬಂಧ. ಹಿಡಿದದ್ದಕ್ಕೂ, ಮುಟ್ಟಿದ್ದಕ್ಕೂ ಅವರಿಗೆ ಜೋಯಿಸರ ಮಾತೇ ಪ್ರಮಾಣ. ಅತಿರೇಕವೆಂದರೆ ಮಕ್ಕಳ ಸ್ಕೂಲು, ಕಾಲೇಜಿನ ಫೀಸನ್ನು ಕಟ್ಟಲು ಕೂಡಾ ಅವರಿಂದ ಮುಹೂರ್ತವನ್ನೂ, ಎಷ್ಟು ಅಂಕಗಳು ಬರಬಹುದೆಂದು ಭವಿಷ್ಯವಾಣಿಯನ್ನೂ ಕೇಳಿಕೊಂಡು ಬರುತ್ತಿದ್ದರು. ಕಂಠೀ ಜೋಯಿಸರೂ ಮೂರ್ತಿಯವರ ಯಾವ ಪ್ರಶ್ನೆಗೂ ಇಲ್ಲವೆಂದು ಹೇಳದೆ ಪರಿಹಾರ, ಉತ್ತರ ಹೇಳುತ್ತಿದ್ದರು. ಇನ್ನೊಂದು ವಿಷಯವೆಂದರೆ ಜೋಯಿಸರು ಯಾರಿಗೂ 'ಇಂತಹ ಪ್ರಶ್ನೆಗೆ, ಇಷ್ಟು ದಕ್ಷಿಣೆ ಎಂದು ನಿಗದಿ ಪಡಿಸದೆ, ಎಲೆಯಡಿಕೆಯ ಮೇಲೆ ಏನಿಟ್ಟಿದ್ದರೆ ಅದನ್ನು ಕಣ್ಣಿಗೊತ್ತಿಕೊಂಡು ತೆಗೆದುಕೊಳ್ಳುತ್ತಿದ್ದುದರಿಂದ ಜನರಿಗೆ ಒಂದರ್ಥದಲ್ಲಿ ಸದರವಾಗಿಬಿಟ್ಟಿದ್ದರೆ' ಎನ್ನುವ ಅನುಮಾನವೂ ನನ್ನನ್ನು ಕಾಡಿದ್ದಿದೆ.

ಮೂರ್ತಿಯವರು ಹೀಗೆ ಪದೇ ಪದೇ ಅವರೊಂದಿಗೆ ಸಮಾಲೋಚನೆ ನಡೆಸಿಬರುತ್ತಿದ್ದುದರಿಂದ ಜೋಯಿಸರಿಗೆ ಅವರ ಮನೆಯವರೆಲ್ಲರ ಜಾತಕ ತಲೆಯಲ್ಲೇ ಅಚ್ಚಾಗಿಹೋಗಿತ್ತು. ಜೋಯಿಸರು ಹೇಳಿದ ಭವಿಷ್ಯವೇ ನಿಜವಾಗುತ್ತಿತ್ತೋ, ಮೂರ್ತಿಯವರೇ ಅದನ್ನು ನಿಜಮಾಡಿಕೊಳ್ಳುತ್ತಿದ್ದರೋ ಅದು ಬಿಡಿಸಲಾಗದ ರಹಸ್ಯ ಬಿಡಿ. ಕಂಠೀ ಜೋಯಿಸರು ಒಳ್ಳೆಯ ಜ್ಯೋತಿಷಿಯಾಗಿದ್ದರು, ನಿಖರವಾದ ಭವಿಷ್ಯವನ್ನೇ ಹೇಳುತ್ತಿದ್ದರು ಎನ್ನುವುದು ಜನಜನಿತವಾದ ನಂಬಿಕೆ; ಅದು ಸುಳ್ಳಾದಂತಹ ಪ್ರಸಂಗವನ್ನು ಇದುವರೆಗೂ ಯಾರೂ ಹೇಳಿಲ್ಲ, ಕೇಳಿಲ್ಲ.

ಮೂರ್ತಿಯವರಿಗೆ ಅರವತ್ತು ವರ್ಷ ದಾಟಿ, ಅವರ ಗಂಡು-ಹೆಣ್ಣು ಮಕ್ಕಳಿಗೆಲ್ಲಾ ಮದುವೆಗಳಾಗಿ ಮನೆ ತುಂಬಾ ಮೊಮ್ಮಕ್ಕಳು ತುಂಬಿಕೊಂಡು ಸಂತೃಪ್ತ ಜೀವನ ನಡೆಸುತ್ತಿರುವ ಕಾಲದಲ್ಲಿ, ಅದೊಂದು ಘಳಿಗೆಯಲ್ಲಿ ಇದ್ದಕ್ಕಿದ್ದಂತೆ ಒಂದು ಪ್ರಶ್ನೆ ತಲೆಹೊಕ್ಕಿಬಿಟ್ಟಿತು. ಬೆಂಗಳೂರಿನಲ್ಲಿ ಯಾವುದೋ ಮದುವೆಗೆ ಹೋಗಿದ್ದಾಗ ಅವರ ಸಮೀಪದ ಬಂಧುಗಳು "ಏನಾದ್ರೂ ನೀವು ಪುಣ್ಯವಂತರು ಬಿಡಿ, ಪಡಕೊಂಡು ಹುಟ್ಟಿದೀರ. ಒಳ್ಳೇ ಆರೋಗ್ಯ, ಸತಿ, ಸುತ, ಮೊಮ್ಮಕ್ಕಳ ಭಾಗ್ಯ ಎಲ್ಲವನ್ನೂ ಎರಡೂ ಕೈಯಲ್ಲಿ ತುಂಬಿಕೊಂಡು ತಂದುಬಿಟ್ಟಿದೀರಿ" ಎಂದು ಭುಜ ತಟ್ಟಿದಾಗ, ಸ್ವಲ್ಪ ಕಿಲಾಡಿ ಆಸಾಮಿಯೆಂದೇ ಹೆಸರಾಗಿದ್ದ ಆತನಿಗೆ ತನ್ನ ಬಗ್ಗೆ ಇರುವುದು ಮೆಚ್ಚುಗೆಯೋ ಅಥವಾ ಈರ್ಷೆಯೋ ಎನ್ನುವುದನ್ನು ಸ್ವತಃ ಮೂರ್ತಿಯವರಿಗೆ ನಿರ್ಧರಿಸಲಾಗಲಿಲ್ಲ. 'ಅವನ ಕೆಟ್ಟ ಕಣ್ಣು ತನ್ನ ಮೇಲೇಕೆ ಬಿತ್ತೋ' ಎಂದು ತಮ್ಮಷ್ಟಕ್ಕೆ ತಾವೇ ಪರಿತಪಿಸಿಕೊಂಡರು. ಆ ಘಳಿಗೆಯಲ್ಲಿ ಇದ್ದಕ್ಕಿದ್ದಂತೆ ಅವರ ಮನಸ್ಸಿಗೆ ತಾನು ಇನ್ನೆಷ್ಟು ಕಾಲ ಬದುಕಬಹುದು ಎನ್ನುವ ಪ್ರಶ್ನೆಯೋ, ಆತಂಕವೋ ಹುಟ್ಟಿಕೊಂಡುಬಿಟ್ಟಿತು. ಊರಲ್ಲಾಗಿದ್ದರೆ ತಕ್ಷಣವೇ ಕಂಠೀ ಜೋಯಿಸರ ಮನೆಗೆ ಎಡತಾಕುತ್ತಿದ್ದರೇನೋ, ಆದರೆ ಅಪರೂಪಕ್ಕೆ ಹೋಗಿದ್ದರಿಂದ, ಹೆಂಡತಿ ಮಕ್ಕಳೆಲ್ಲರೂ ಬೆಂಗಳೂರಿನ ಎಲ್ಲ ಬಂಧು, ಬಾಂಧವರನ್ನು ನೋಡಿಕೊಂಡೇ ಊರಿಗೆ ಹೋಗುವುದು ಎಂದು ಹಟ ಹಿಡಿದಿದ್ದರಿಂದ ವಾಪಸ್ಸಾಗಲು ಒಂದು ವಾರವೇ ಆಗಿಹೋಯಿತು.

ಅಂತೂ ಊರಿಗೆ ಬಂದ ತಕ್ಷಣ ಕಂಠೀ ಜೋಯಿಸರಲ್ಲಿಗೆ ಓಡಿದರು. ಸ್ವಲ್ಪ ಆತಂಕದಲ್ಲೇ ಬಂದವರನ್ನು ನೋಡಿ ಜೋಯಿಸರಿಗೂ ಗಾಭರಿಯಾಯಿತು. ಪ್ರಯಾಣಕ್ಕೆ ತಾವೇ ಇಟ್ಟುಕೊಟ್ಟ ಮುಹೂರ್ತ, ಬೇರೇನೂ ಅವಘಡವಾಗಿರುವ ಸಂಭವವಿಲ್ಲ ಎಂದುಕೊಂಡರೂ, ದುಗುಡಕ್ಕೆ ಕಾರಣವೇನು ಎಂದು ಮೂರ್ತಿಯವರನ್ನು ಸ್ವಲ್ಪ ಕಳಕಳಿಯಿಂದಲೇ ಕೇಳಿದರು. ಸ್ವಲ್ಪ ಹೊತ್ತು ಸುಮ್ಮನಿದ್ದ ಮೂರ್ತಿಯವರು "ಕಂಠಿ, ಬೆಂಗಳೂರಲ್ಲಿ ಯಾರದೋ ಕೆಟ್ಟ ಕಣ್ಣು ನನ್ನ ಮೇಲೆ ಬಿತ್ತು ನೋಡೋ, ಮನಸ್ಸಿನ ಸಮಾಧಾನಾನೇ ಹೊರಟೋಯ್ತು. ನಾನು ಇನ್ನೆಷ್ಟು ಕಾಲ ಬದುಕಿರ್ತೀನೋ ಅನ್ನೋ ಆತಂಕ ಶುರುವಾಗಿಬಿಟ್ಟಿದೆ ಕಣೋ ಆವಾಗಿಂದ. ಸ್ವಲ್ಪ ನೀನು ನೋಡಿ ಹೇಳ್ತೀಯಾ" ಎಂದು ತಮ್ಮ ಮನದಲ್ಲಿ ಕೊರೆಯುತ್ತಿದ್ದ ವಿಷಯವನ್ನು ಹೊರಹಾಕಿದರು. ಪ್ರಶ್ನೆ ಕೇಳಿದ ಜೋಯಿಸರು ಸ್ವಲ್ಪ ಗಂಭೀರವಾಗಿ "ನೋಡು ಮೂರ್ತಿ, ನಾನು ಯಾವ ಪ್ರಶ್ನೆಗೆ ಬೇಕಾದ್ರೂ ಉತ್ತರ ಹೇಳ್ತೀನಿ. ಆದ್ರೆ ಸಾವಿನ ಪ್ರಶ್ನೆಗೆ ಮಾತ್ರಾ ಇದುವರೆಗೂ ಹೇಳಿಲ್ಲ; ಮುಂದೂ ಹೇಳಲ್ಲ" ಅಂದುಬಿಟ್ಟರು. ಆದರೆ ಮೂರ್ತಿಗಳು ಬಿಡಬೇಕಲ್ಲ. ಹೇಳದಿದ್ದರೆ ಅದೇ ವ್ಯಸನದಲ್ಲೇ ಸತ್ತುಹೋಗ್ತೀನಿ ಎಂದು ಹೆದರಿಸಿ, ಅದು ಹೇಗೋ ಅಂತೂ ಗೆಳೆತನದ ಬಂಡವಾಳದ ಮೇಲೆ ಜೋಯಿಸರನ್ನು ಒಪ್ಪಿಸಿಯೇಬಿಟ್ಟರು.

ಮೂರ್ತಿಗಳ ಜಾತಕವನ್ನು ತಲೆಗೆ ತಂದುಕೊಂಡ ಕಂಠೀಜೋಯಿಸರು ಪಂಚಾಗದ ಪುಟ ತಿರುವಿದರು. ಮುಖ ಗಂಭೀರವಾಯಿತು. "ಬೇಡ ಕಣೋ, ನೀನು ಕೇಳಬೇಡ, ನಾನು ಹೇಳಲ್ಲ" ಎಂದು ಮತ್ತೆ ಅಂದರು. ಆದರೆ ಮೂರ್ತಿಗಳು ಅದೇನೇ ಇದ್ದರೂ ತಿಳಿದುಕೊಳ್ಳಲೇ ಬೇಕು ಎನ್ನುವ ಹಟ ಹಿಡಿದಿದ್ದರಿಂದ ಬೇರೆ ಉಪಾಯವಿಲ್ಲದೆ "ಇಷ್ಟು ಮಾತ್ರ ತಿಳ್ಕೋ. ಈ ಕಾರ್ತೀಕ ಕಳೆದು, ಮಾರ್ಗಶಿರ ಹುಟ್ಟತ್ತಲ್ಲ, ಆ ಮಾರ್ಗಶಿರ ಶುದ್ಧ ದಶಮಿ ದಿನ, ಸಾಯಂಕಾಲ ಆರೂವರೆಗೆ ನಿನಗೆ ಒಂದು ವಾಹನ, ಲಾರಿ ಅಥವಾ ಬಸ್ಸು ಆಗಬಹುದು ಅದರಿಂದ ಒಂದು ಘೋರ ಕಂಟಕ ಇದೆ, ಅದನ್ನ ದಾಟಿಬಿಟ್ರೆ ಆಮೇಲೆ ಎಂಭತ್ತೇಳು ವರ್ಷದ ತನಕ ಯಮನಿಗೆ ನಿನ್ನ ಮುಟ್ಟಕ್ಕೆ ಸಾಧ್ಯವಿಲ್ಲ. ಆದರೆ... ಅದರಿಂದ ತಪ್ಪಿಸ್ಕೊಳೋದು ಅಷ್ಟು ಸುಲಭವಲ್ಲ" ಎಂದು ಹೇಳಿ ಮೌನವಾಗಿ ಕುಳಿತರು. ಮೂರ್ತಿಗಳಿಗೆ ಪಕ್ಕದಲ್ಲೇ ಸಿಡಿಲು ಬಡಿದ ಹಾಗಾಯಿತು. ಎಂದೂ ಕೇಳದಿದ್ದವರು "ಇನ್ನೂ ಒಂದ್ಸಲ ಸರಿಯಾಗಿ ನೋಡಿ ಹೇಳ್ತೀಯಾ?" ಅಂತ ಹೆದರಿಕೆಯಿಂದಲೇ ಕೇಳಿದರು. "ಎಷ್ಟು ಸಲ ನೋಡಿದ್ರೂ ಅಷ್ಟೇ" ಎನ್ನುತ್ತಾ ಪಂಚಾಗವನ್ನು ಮಡಿಚಿಡುತ್ತಾ "ಅದಕ್ಕೇ ನಾನು ಯಾರಿಗೂ ಸಾವಿನ ಕುರಿತಾಗಿ ಹೇಳಲ್ಲ ಅನ್ನೋದು. ಇರೋಷ್ಟು ದಿನ ನೆಮ್ಮದಿಯಾಗಿರ್ದೆ ಸಾವನ್ನ ಕಾಯ್ತಾ ಕೂತ್ಕೊಳೋ ಹಾಗಾಗುತ್ತೆ" ಎಂದು ಸುಮ್ಮನೆ ಕುಳಿತರು. ಅಂದರೆ ಇಂದು ಆಶ್ವೀಜ ಬಹುಳ ತದಿಗೆ... ಇನ್ನು ಬರೀ ಐವತ್ತೆರಡು ದಿವಸವಷ್ಟೇ... ಬೇರೇನೂ ತೋಚದೆ ಮೂರ್ತಿಗಳೂ ಚಿಂತೆಯಿಂದ ಭಾರವಾಗಿ ಮನೆಕಡೆಗೆ ಹೆಜ್ಜೆ ಹಾಕಿದರು.

ಅಂದಿನಿಂದ ಅವರ ಮಾತೇ ಕಡಿಮೆಯಾಗಿಹೋಯಿತು. ಮನೆಯವರಿಗೂ ಇವರ ಈ ಪರಿ ಅರ್ಥವಾಗದೆ ಏನೇನು ಕೇಳಿದರೂ ಮೂರ್ತಿಗಳು ಗುಟ್ಟು ಬಿಟ್ಟುಕೊಡಲಿಲ್ಲ. ತನ್ನೊಬ್ಬನ ನೆಮ್ಮದಿ ಹಾಳಾಗಿರೋದು ಸಾಕು, ಮನೆಯವರ ನೆಮ್ಮದಿ ಏಕೆ ಕೆಡಿಸಬೇಕು ಎಂದುಕೊಂಡರೂ ಒಂದೊಂದು ದಿನ ಮುಂದೆ ಹೋಗುತ್ತಿದ್ದ ಹಾಗೂ ಅವರ ಕಲಮಲ ಹೆಚ್ಚುತ್ತಾ ಹೋಯಿತು. ಊಟ ಸೇರದೆ, ನಿದ್ರೆ ಬಾರದೆ ಬಳಲಿಹೋದರು. ಮನೆಯವರೊಂದಿಗೆ ಮಾತೂ ಹೆಚ್ಚುಕಡಿಮೆ ನಿಂತುಹೋಯಿತು. ದೀಪಾವಳಿಯ ದಿನ "ಇದು ನನ್ನ ಕಡೆಯ ದೀಪಾವಳಿ" ಎನ್ನಿಸಿ ದೀಪದ ಪ್ರಭೆ ಕಾಣಿಸದೆ ಎಲ್ಲೆಲ್ಲೂ ಕತ್ತಲೆಯೇ ತುಂಬಿಕೊಂಡಂತೆ ಭಾಸವಾಯಿತು. ಹಬ್ಬದೂಟ ರುಚಿಸಲಿಲ್ಲ. ಊಟ, ಉಡುಗೆಗಳಲ್ಲಿ ಸದಾ ಆಸಕ್ತಿಯಿದ್ದವರು ಹೀಗೇಕಾಗಿದ್ದಾರೆ ಎಂದು ಮನೆಯವರೆಲ್ಲರಿಗೂ ಆತಂಕವಾಗಿ ಡಾಕ್ಟರ ಹತ್ತಿರ ಹೋಗೋಣ ಎಂದು ಒತ್ತಾಯಿಸಿದರೆ "ನನಗೇನೂ ಆಗಿಲ್ಲ, ನಾನು ಬರುವುದಿಲ್ಲ" ಎಂದು ಹಟಹಿಡಿದು ಬಿಟ್ಟರು. ಮನೆಯವರೆಲ್ಲರಿಗೂ ಇವರ ಯೋಚನೆಯೇ ಶುರುವಾಗಿ ಕಂಠೀ ಜೋಯಿಸರ ಬಳಿಯೂ ಪ್ರಶ್ನೆ ಕೇಳಿಕೊಂಡು ಬಂದರು. ಜೋಯಿಸರು ಏನನ್ನೂ ಬಾಯಿ ಬಿಡಲಿಲ್ಲ.

ಅಂತೂ ಮಾರ್ಗಶಿರ ಮಾಸವೂ ಆರಂಭವಾಯಿತು. ಈಗ ಮೂರ್ತಿಗಳ ಯೋಚನೆ ಇನ್ನೊಂದು ರೀತಿಯಲ್ಲಿ ತಿರುಗಿತು. ಆ ದಿನ ನಾನು ಹೊರಗೇ ಹೋಗದಿದ್ದರೆ?! ಹೋದರೆ ತಾನೇ ಬಸ್ಸೋ, ಲಾರಿಗೋ ಸಿಕ್ಕಿಕೊಳ್ಳುವುದು. ಅಂದು ಸಂಜೆ ಆರೂವರೆಯ ತನಕ ಮನೆಯಿಂದ ಹೊರಗೆ ಹೆಜ್ಜೆಯಿಡದಿದ್ದರೆ ಆಯಿತು. ಜೋಯಿಸರು ಕಷ್ಟ ಸಾಧ್ಯ ಎಂದಿದ್ದಾರೆಯೇ ಹೊರತು ಅಸಾಧ್ಯ ಎಂದೇನೂ ಹೇಳಲಿಲ್ಲವಲ್ಲ. ಆ ಘಳಿಗೆ ದಾಟಿಬಿಟ್ಟರೆ ಇನ್ನು ಎಂಭತ್ತೇಳು ವರ್ಷದ ತನಕ ಯೋಚನೆಯೇ ಇಲ್ಲವಲ್ಲ ಎನ್ನುವ ಆಲೋಚನೆ ಬಂದು, ಇದ್ದಕ್ಕಿದ್ದಂತೆ ಅಸಾಧ್ಯ

ಹುರುಪು ಬಂದು ಮನೆಯವರೊಂದಿಗೆ ಮೊದಲಿನಂತೆಯೇ ಸರಸವಾಗಿ ಕಾಲ ಕಳೆದರು, ಮೊಮ್ಮಕ್ಕಳೊಂದಿಗೆ ಆಟವಾಡಿದರು. ಹೆಂಡತಿಯೊಂದಿಗೆ ಹೇಳಿ ಬೇಕಾದ್ದನ್ನೆಲ್ಲಾ ಮಾಡಿಸಿ ತಿಂದರು. ಮನೆಯವರೂ ಸಧ್ಯ ಮೊದಲಿನಂತಾದರಲ್ಲ ಎಂದು ನಿಶ್ಚಿಂತೆಯಿಂದ ಉಸಿರು ಬಿಟ್ಟರು.

ದಶಮಿಯ ದಿನವೂ ಬಂತು. "ಇವತ್ತು ಯಾರು ನನ್ನನ್ನು ಕೇಳಿಕೊಂಡು ಬಂದರೂ ನಾನು ಮನೆಯಲ್ಲಿಲ್ಲ ಎಂದು ಹೇಳಿಬಿಡಿ. ನಾನಿವತ್ತು ಗುರುಚರಿತ್ರೆ ಓದುವ ಸಂಕಲ್ಪ ಮಾಡಿದ್ದೇನೆ. ಮಹಡಿಯ ಮೇಲೆ ನನ್ನ ಕೋಣೆಯಲ್ಲೇ ಕುಳಿತು ಓದುತ್ತಿರುತ್ತೇನೆ. ಊಟ ಬೇಡ. ಮಧ್ಯಾಹ್ನ ಬಾಳೆಹಣ್ಣು, ಒಂದು ಲೋಟ ಹಾಲು ತಂದು ಕೊಟ್ಟುಬಿಡಿ. ಓದಿ ಮುಗಿದ ಮೇಲೆ ನಾನೇ ಬರುತ್ತೇನೆ. ಯಾರೂ ಯಾವುದಕ್ಕೂ ನನ್ನನ್ನು ಕರೆಯಬೇಡಿ" ಎಂದು ಬೆಳಗ್ಗೆಯೇ ಮಹಡಿಯನ್ನು ಸೇರಿಬಿಟ್ಟರು. ಮನೆಯವರಿಗೂ ಇದೇನೀ ಪರಿ ಅನ್ನಿಸಿದರೂ 'ಪಾರಾಯಣ' ತಾನೇ ಮಾಡಿಕೊಳ್ಳಲಿ ಬಿಡು ಎಂದು ಸುಮ್ಮನಾಗಿ ಮಧ್ಯಾಹ್ನ ಮಹಡಿಯ ಮೇಲೆ ಹೋಗಿ ಹಾಲು, ಹಣ್ಣು ಇಟ್ಟರು. ಮೂರ್ತಿಗಳು ಪುಸ್ತಕದಲ್ಲೇ ಮುಳುಗಿದ್ದರು. ಮಿಕ್ಕವರೆಲ್ಲರೂ ಊಟ ಮಾಡಿ ತಂತಮ್ಮ ವ್ಯವಹಾರಗಳಲ್ಲಿ ಮುಳುಗಿಹೋದರು.

ಸಂಜೆ ನಾಲ್ಕು ಗಂಟೆಗೆ ಓದಿದ್ದು ಮುಗಿಯಿತು. ಸ್ವಲ್ಪ ಹೊತ್ತು ನಿದ್ರೆಯನ್ನಾದರೂ ಮಾಡೋಣವೆಂದುಕೊಂಡು ಮಲಗಲು ಯತ್ನಿಸಿದರು. ನಿದ್ರೆ ಹೇಗೆ ಬಂದೀತು? ಇನ್ನು ಎರಡೂವರೆ ಗಂಟೆ ಕಳೆದರೆ, ಗಂಡಾಂತರದಿಂದ ಪಾರು. ಹೇಗೋ ಕಳೆದುಬಿಡಬೇಕು ಎಂದುಕೊಂಡು ಹಾಸಿಗೆಯ ಮೇಲೆ ಹೊರಳಾಡಿದರು. ಕೆಳಗೆ ಮೊಮ್ಮಕ್ಕಳ ಆಟ, ಮನೆಯವರ ಮಾತು ಎಲ್ಲಾ ಕೇಳಿಸುತ್ತಿದೆ. ಸಂಜೆ ಆರೂವರೆ ಕಳೆದುಬಿಟ್ಟರೆ ಮತ್ತೆ ಇದೆಲ್ಲಾ ನನ್ನದೇ… ಇನ್ನೇನು ಗಂಡಾಂತರದ ಸಮಯ ಮುಗಿಯುತ್ತಾ ಬಂತು ಎಂದುಕೊಳ್ಳುತ್ತಾ ಪಶ್ಚಿಮದ ಕಿಟಕಿಯಿಂದ ಮುಳುಗುತ್ತಿರುವ ಸೂರ್ಯನನ್ನು ನೋಡತೊಡಗಿದರು. ಗಡಿಯಾರದ ಟಿಕ್, ಟಿಕ್ ಕೇಳುತ್ತಿದ್ದರೂ ಸಮಯ ಮುಂದುವರೆಯುತ್ತಲೇ ಇಲ್ಲ ಅನ್ನಿಸಿಬಿಟ್ಟಿತು. ಕೆಳಗಿನಿಂದ ಮೆಣಸಿನ ಕಾಯಿ ಬೋಂಡವೇನೋ ಗಮ್ಮೆನ್ನುತ್ತಿದೆ ಜೊತೆಗೆ ಕಾಫಿಯ ಸುವಾಸನೆ ಬೇರೆ ಕೆಣಕಿತು… ಬಾಯಿ ನೀರೂರುತ್ತಿದೆ. ಇನ್ನು ಕೇವಲ ಒಂದು ಗಂಟೆ… ಮುಕ್ಕಾಲು ಗಂಟೆ… ಅರ್ಧ ಗಂಟೆ… ಕಾಲು ಗಂಟೆ… ಎದೆಬಡಿತ ಹೆಚ್ಚಾಯಿತು.

ಅಂತೂ ಇಂತೂ ಆರೂ ಇಪ್ಪತ್ತೈದಾಯಿತು… ಇನ್ನು ಐದು ನಿಮಿಷವಷ್ಟೇ ಕೆಳಗಡೆ ಹೋಗಿ ಕೈಕಾಲು ಮುಖ ತೊಳೆದುಕೊಳ್ಳುವುದರೊಳಗೆ ಆರೂವರೆಯಾಗಿಬಿಡುತ್ತದೆ. 'ಅಂತೂ ನಾನು ಗಂಡಾಂತರವನ್ನು ಗೆದ್ದೆ' ಎನ್ನುವ ಸಂತೋಷದಲ್ಲಿ ಮಹಡಿಯ ಮೆಟ್ಟಿಲನ್ನು ಇಳಿಯತೊಡಗಿದರು. ಎಲ್ಲರೂ ಒಳಗೆ ಸೇರಿಬಿಟ್ಟಿದ್ದಾರೆ. ಕತ್ತಲಾಗುತ್ತಾ ಬಂದರೂ ಇನ್ನೂ ವರಾಂಡದ ದೀಪವನ್ನು ಹಾಕಿಲ್ಲ ಎಂದುಕೊಳ್ಳುತ್ತಾ ಅಭ್ಯಾಸಬಲದಿಂದ ಮೆಟ್ಟಿಲ ಪಕ್ಕದಲ್ಲಿದ್ದ ಸ್ವಿಚ್ಚನ್ನು ಅದುಮಲು ಕಡೆಯ ಮೆಟ್ಟಿಲನ್ನು ಇಳಿಯುತ್ತಾ ಸ್ವಿಚ್ಚಿನ ಕಡೆಗೆ ಕೈಚಾಚುತ್ತಾ ಗೊತ್ತಿಲ್ಲದೆ ನೆಲದ ಮೇಲೆ ಬಿದ್ದಿದ್ದ ಏನೋ ಆಟಿಕೆಯ ಮೇಲೆ ಕಾಲಿಟ್ಟರು ಅಷ್ಟೇ, ಸ್ಕೇಟಿಂಗ್ ಶೂನ ಮೇಲೆ ಕಾಲಿಟ್ಟಂತೆ ಸೀದಾ ಜಾರುತ್ತಾ ಹೋಗಿ ಎದುರಿನ ಕಂಬಕ್ಕೆ ಡಿಕ್ಕಿ ಹೊಡೆದು ಕೆಳಗೆ ಬಿದ್ದರು. ತಲೆಯೊಡೆದು ಗಾಭರಿಗೇ ಪ್ರಾಣ ಹಾರಿಹೋಗಿತ್ತು. ಆಟಿಕೆಯ ಲಾರಿ ಪಕ್ಕದಲ್ಲೇ ಬಿದ್ದಿತ್ತು, ಅದರ ಚಕ್ರಗಳು ಇನ್ನೂ ತಿರುಗುತ್ತಲೇ ಇದ್ದವು…

ಜ್ಯೋತಿಷ್ಯ ವಾಣಿ ನಿಜವಾಯಿತೆ?! ಇನ್ನೈದು ನಿಮಿಷ ಮಹಡಿಯ ಮೇಲೇ ಕಳೆದಿದ್ದರೆ ಬದುಕಿ ಉಳಿದಿರುತ್ತಿದ್ದರೇ??

ಟಿ. ಎಸ್. ಶ್ರವಣ ಕುಮಾರಿ

ಲೇಖನ - ಹಳೆಯ ನೆನಪು

ಇಸವಿ 1978, ನನ್ನ ಅಪ್ಪನ ಸಂಬಳ ತಿಂಗಳಿಗೆ 300 ರೂಪಾಯಿಗಳು ಇರಬಹುದು. ಆಗ ನನ್ನ ತಂದೆ ಮನೆಗೆ ಒಂದು ಟೇಪ್‌ರೆಕಾರ್ಡರ್ ತರುತ್ತಾರೆ. ಅದೇನೆನಿಸಿತ್ತೋ ಗೊತ್ತಿಲ್ಲ, ಅವರ ಸಂಪರ್ಕದಲ್ಲಿದ ಎಲ್ಲರಿಂದಲೂ ಮತ್ತು ಮನೆಗೆ ಯಾರೇ ಬರಲಿ, ಅವರಿಂದ ಹಾಡು ಇಲ್ಲವೆ ಕವನ ಅಥವಾ ಸೀಸ ಪದ್ಯ ಅಥವಾ ಮಂತ್ರ, ಶ್ಲೋಕಗಳನ್ನು ಹೇಳಿಸಿ ರೆಕಾರ್ಡ್ ಮಾಡಿ ಇಡುವುದು ಅವರ ಹವ್ಯಾಸ. ಆಗಿನ ಕಾಲಕ್ಕೆ ಅವರಿಗೆ ಬರುತ್ತಿದ್ದ ಆ ಸಂಬಳಕ್ಕೆ ಇದು ಒಂದು ಶೋಕಿ ಎಂದರೆ ತಪ್ಪಾಗದು. ಹೀಗೆ ಅವರು ಒಟ್ಟು ರೆಕಾರ್ಡ್ ಮಾಡಿದ್ದು ಒಂದೊಂದು ಗಂಟೆ ಅವಧಿಯ ಆರು ಕ್ಯಾಸೆಟ್‌ಗಳು.

ಇಸವಿ ೨೦೦೩ ನನ್ನ ಅಮ್ಮನ ಮರಣದ ನಂತರ ಅಪ್ಪ ಏಕಾಂತದಲ್ಲಿ ಆ ಹಾಡುಗಳನ್ನು ತಮ್ಮ ಹಳೆಯ ಟೇಪ್‌ರೆಕಾರ್ಡರ್‌ನಲ್ಲಿ ಕೇಳಿಸಿಕೊಳ್ಳುತ್ತಿದ್ದರು. ಕ್ಯಾಸೆಟ್ ಹಳೆಯದಾದ್ದರಿಂದ ಧ್ವನಿ ಮುದ್ರಣದ ಗುಣಮಟ್ಟ ಅಷ್ಟೇನೂ ಚೆನ್ನಾಗಿರಲಿಲ್ಲ., ನಾನು ಆ ಧ್ವನಿಮುದ್ರಣಗಳನ್ನು mp3 ಗೆ ಬದಲಾಯಿಸಿ ಅವರಿಗೆ ಒಂದು mp3 ಪ್ಲೇಯರ್ ತಂದು ಕೊಟ್ಟು ಅದರಲ್ಲಿ ಎಲ್ಲಾ ಧ್ವನಿಮುದ್ರಣವನ್ನು ಹಾಕಿಕೊಟ್ಟಿದ್ದೆ. ನನ್ನ ತಂದೆ ಅದನ್ನು ಆಲಿಸುತ್ತಾ ಅವರದೇ ಯಾವುದೋ ಒಂದು ಸುಂದರ ಲೋಕದಲ್ಲಿ ವಿಹರಿಸುತ್ತಿದ್ದರು. ನಾನು ಆಗ ಲಭ್ಯವಿದ್ದ ಕೆಲವು ತಂತ್ರಾಂಶಗಳನ್ನು ಬಳಸಿ ಧ್ವನಿಮುದ್ರಣದ ಗುಣಮಟ್ಟವನ್ನು ಹೆಚ್ಚಿಸಿದ್ದೆ.

ಇತ್ತೀಚೆಗೆ ಲಾಕ್‌ಡೌನ್ ಸಮಯದಲ್ಲಿ ನನ್ನ ಕಂಪ್ಯೂಟರ್‌ನಲ್ಲಿ ಇರುವ ಎಲ್ಲಾ ಫೈಲ್ಗಳನ್ನು ನೋಡಲು ಸಮಯ ಸಿಕ್ಕತು. ಆಗ ಮತ್ತೆ ನೋಡಿದ್ದು ನನ್ನ ತಂದೆಯು ಸೃಷ್ಟಿಸಿದ್ದ ಈ ಅಮೂಲ್ಯವಾದ ಆಸ್ತಿ. ಇದರಲ್ಲಿರುವ ಶೇಕಡ 70ರಷ್ಟು ಧ್ವನಿಗಳು ಈಗಾಗಲೇ ಶಿವನ ಪಾದ ಸೇರಿಯಾಗಿದೆ. ನಾನು ಹೇಳಿರುವ ಪದ್ಯ "ನಮ್ಮ ಮನೆಯಲೊಂದು ಸಣ್ಣ ಪುಟ್ಟ ಪಾಪವಿರುವುದು", ಅಕ್ಕ ಸಂಗೀತ ಕಲಿಯುತ್ತಿದ್ದಾಗ ಹೇಳುತ್ತಿದ್ದ ಹಾಡುಗಳು, ತಾತಂದಿರ ಮಂತ್ರಗಳು, ಅಮ್ಮ, ಚಿಕ್ಕಮ್ಮ, ದೊಡ್ಡಮ್ಮ, ಅತ್ತೆ, ಅಜ್ಜಿಯರು ಹಾಡಿರುವ ಹಾಡುಗಳು, ಅಪ್ಪನ ಗೆಳೆಯರು ಹೇಳಿರುವ ಭಕ್ತಿಗೀತೆಗಳು, ದೊಡ್ಡಪ್ಪನ ತೆಲುಗು ಸೀಸ ಪದ್ಯ ಇನ್ನೂ ಏನೇನೋ.

ಈ ಹಾಡುಗಳಲ್ಲಿ, ನನ್ನ ತಂದೆಯ ತಾಯಿ ಹೇಳಿರುವ ಒಂದು ತೆಲುಗು ಹಾಡು ಜಯಮಂಗಳ ಶುಭಮಂಗಳ ಎಂದು. ಇದರಲ್ಲಿ ಮನೆಯಲ್ಲಿರುವ ಪ್ರತಿಯೊಬ್ಬರ ಗುಣಗಳ ಬಗ್ಗೆ ಮೂರು ಸಾಲು ಹಾಡಿ ಕಡೆಗೆ ಅವರ ಹೆಸರನ್ನು ಹೇಳಿ ಜಯಮಂಗಳ ಶುಭಮಂಗಳ ಎಂದು ಹಾಡುತ್ತಾರೆ. ಹೀಗ ಹಾಡುವಾಗ ನಮ್ಮ ತಾತನ ಹೆಸರಿನ ಸರದಿ ಬಂದಿದೆ. ಗಂಡನ ಬಗ್ಗೆ ಅಜ್ಜಿಯು ಮೂರು ಸಾಲುಗಳನ್ನು ಹೇಳಿ, ಗಂಡನ ಹೆಸರು ಹೇಳಲು ನಾಚಿಕೆ

ಪಟ್ಟುಕೊಳ್ಳುತ್ತಿರುವಾಗ ನಮ್ಮ ತಾತ ಸುಬ್ಬರಾಯ ಶಾಸ್ತ್ರಿ ಅಂತ ಹೇಳು ಎಂದು ಜೋರಾಗಿ ಕೂಗಿರುವುದು ಧ್ವನಿಮುದ್ರಣವಾಗಿದೆ. ಸುಮಾರು ಆರು ಗಂಟೆಗಳ ಈ ಧ್ವನಿಮುದ್ರಣವನ್ನು ಇತ್ತೀಚೆಗೆ ಮನೆಯವರೆಲ್ಲಾ ಸಾಕಷ್ಟು ಕೇಳುತ್ತಿದ್ದೇವೆ.

ಹಾ, ಈ ನನ್ನ ತಂದೆಯ ಹವ್ಯಾಸ ನನ್ನ ಮೇಲೂ ಸ್ವಲ್ಪ ಪರಿಣಾಮ ಭೀರಿ ನನ್ನ ತಾಯಿಯ ತಾಯಿ ಅಂದರೆ ಅಜ್ಜಿಯ ಸುಮಾರು 15 ಹಾಡುಗಳು, ಹಾಗೂ ನನ್ನ ತಾಯಿಯ ತಂಗಿಯ ಸುಮಾರು 30 ಹಾಡುಗಳನ್ನು ನಾನು ಅವರು ಬದುಕಿದ್ದಾಗ ರೆಕಾರ್ಡ್ ಮಾಡಿದ್ದೇನೆ. ಬ್ಯಾಂಕಿನ ಮೊದಲ ಸಂಬಳದಲ್ಲೇ ನಾನು ಒಂದು ಕ್ಯಾಮೆರಾ ಖರೀದಿಮಾಡಿದ್ದೆ. ನಮ್ಮ ಮನೆಗೆ ಯಾವುದೇ ಗಂಡ ಹೆಂಡಿರ ಜೋಡಿ ಬಂದರೆ ಅವರ ಒಂದು ಫೋಟೋ ತೆಗೆಯುವುದು ನನ್ನ ಹವ್ಯಾಸವಾಗಿತ್ತು. ಹಾಗಾಗಿ ಈಗ ನನ್ನ ಮನೆಯಲ್ಲಿ ಸುಮಾರು 60 ಜೋಡಿಗಳ ಫೋಟೋಗಳು ಸುರಕ್ಷಿತವಾಗಿದೆ.

ಸುಮಾರು ಹಾಡುಗಳನ್ನು / ಧ್ವನಿಗಳನ್ನು ಈಗ ವಿಂಗಡಿಸಿ ಹಾಡಿದವರ ಮಕ್ಕಳು ಮೊಮ್ಮಕ್ಕಳಿಗೆ ಕಳಿಸಿದೆ. ಅವರೆಲ್ಲಾ ಬಹಳ ಸಂತೋಷಪಟ್ಟರು. ಹಾಗೇ ಫೋಟೋಗಳನ್ನು ಸ್ಕ್ಯಾನ್ ಮಾಡಿ ಕಳಿಸುತ್ತಿದ್ದೇನೆ.

ಈಗ ಹೇಳಿ, ನಾವು ನಮಗೆ ಇಷ್ಟವಾದ ವಿಷಯಗಳ ಬಗ್ಗೆ ಮಾತನಾಡಿ ವೀಡಿಯೋಗಳನ್ನು ಏಕೆ ಮಾಡಿಡಬಾರದು. ಮುಂದೆ ನಮ್ಮ ಮಕ್ಕಳು ಮೊಮ್ಮಕ್ಕಳು ಇದನ್ನು ವೀಕ್ಷಿಸುತ್ತಾ ಸಂತೋಷಪಡುವುದರಲ್ಲಿ ಅನುಮಾನವಿಲ್ಲ. ಸಾಹಿತ್ಯ ದಾಸೋಹಿಗಳಿಗೇನೂ ತೊಂದರೆ ಇಲ್ಲ. ಈಗಂತೂ ನಾವು ದಾಸೋಹದಲ್ಲಿ ಪ್ರಸ್ತುತಿಪಡಿಸುವ ವೀಡಿಯೋಗಳು ಯೂಟ್ಯೂಬ್‌ಸೇರಿ ಖಾಯಂ ಆಗಿ ಉಳಿಯುತ್ತಿದೆ. ಆದರೆ ದಾಸೋಹ ಅಷ್ಟೇ ಅಲ್ಲ ಇನ್ನೂ ಯಾವುದಾದರೂ ವಿಷಯಗಳ ಬಗ್ಗೆ ಮಾತನಾಡಿ ವೀಡಿಯೋ ಮಾಡಿ ಭದ್ರವಾಗಿಡಿ. ನಿಮ್ಮದಷ್ಟೇ ಅಲ್ಲ ನಿಮ್ಮ ಮನೆಯವರಿಗೆಲ್ಲಾ ಹೀಗೆ ಮಾಡಲು ಹೇಳಿ. ಮುಂದೊಂದು ದಿನ ಈ ವೀಡಿಯೋಗಳು ಇನ್ಯಾರಿಗೋ ಅಮೂಲ್ಯವಾದ ಆಸ್ತಿಯಾಗಿ ಕಂಡರೆ ಆಶ್ಚರ್ಯವಿಲ್ಲ.

ವೀಡಿಯೋಗಳನ್ನು ಮಾಡುವಾಗ ದಾಸೋಹದಲ್ಲಿ ಓದುವಂತೆ ಓದಬೇಡಿ. ತಲೆ ತಗ್ಗಿಸಿ ಓದುವ ವೀಡಿಯೋ ನೋಡಲು ಮಜವೇನೂ ಇರುವುದಿಲ್ಲ. ಬಿಚ್ಚುಮನಸ್ಸಿನಿಂದ, ವಿಶಾಲ ಹೃದಯದಿಂದ ನಿಮ್ಮ ಇಷ್ಟವಾದ ವಿಷಯಗಳ ಬಗ್ಗೆ ಮಾತನಾಡಿ, ನೀವು ಬರೆದ ಕಥೆಗಳನ್ನು, ಲೇಖನಗಳನ್ನು ಓದುವುದಕ್ಕಿಂತ ನೇರವಾಗಿ ಅದರ ವಿಷಯಗಳನ್ನು ಹಂಚಿಕೊಳ್ಳಿ.

ಈ ನಿಟ್ಟಿನಲ್ಲಿ ವೀಡಿಯೋ ಮುದ್ರಿಸಲು, ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಲು ತಾಂತ್ರಿಕ ಸಹಾಯ ನೀಡಲು ನಾವು ಯಾವಾಗಲೂ ಸಿದ್ಧ.

ಬನ್ನಿ, ಹಳೆಯ ನೆನಪುಗಳನ್ನು ಉಳಿಸೋಣ ಹಾಗೆಯೇ ಹೊಸ ನೆನಪುಗಳ ಸೃಷ್ಟಿಮಾಡೋಣ.

ಗುರುರಾಜ ಶಾಸ್ತ್ರಿ

ಆಂತರ್ಯದ ಕಲೆಗಳು

ಒಮ್ಮೆ ಶುರುವಿಟ್ಟು

ಕೈಗೆಟುಕದ ಕಪಾಟಿನ ಹಿಂದಿನ ಧೂಳಿನ ಉಂಡೆಗಳು,

ಬಾಗಿಲುಗಳ ಎಲ್ಲ ಹಿಡಿಕೆ ಸಂದಿಗಳ ಕಲೆಗಳು,

ಒಲೆಯ ಹಿಂದಿನ ಗೋಡೆಗೆ ಸಿಡಿದ ಎಣ್ಣೆಜಿಡ್ಡು,

ಮೇಜಿಗೆ ಹರಡಿದ್ದ ಚೀಟಿಗಳು, ನೋಟ್ಸ್, ಚಾರ್ಜರ್, ಪುಸ್ತಕಗಳು,

ಮಂಚದಡಿಗೆ ಒರೆಸಲಾಗದೇ ಉಳಿದ ನೆಲದ ಪಟ್ಟೆಗಳು,

ಎಲ್ಲ ಶುಚಿಗೊಳಿಸಿ ನಿರುಮ್ಮಳ ಒರಗಿ ಕುಳಿತವಳು,

ಮನದ ಮನೆಯ ಹೀಗೇ ಸ್ವಚ್ಛಗೊಳಿಸಬೇಕೆಂದು,

ಎಲ್ಲ ಗೋಡೆ, ಕಿಟಕಿ, ಛಾವಣಿ, ಬಾಗಿಲುಗಳ ಪರಿಶೀಲಿಸಲು,

ಇಲ್ಲುಳಿದಿರುವುದು ನೀನೇ ನೀಡಿದ ಗಾಯಗಳ ಬೇಡದ ನೆನಪುಗಳು,

ಅಳಿಸಲು ಎಲ್ಲಿ ಝಾಡಿಸಿ, ಒರೆಸಿ, ತೊಳೆಯಲಿ ಹೇಳು...

ವಸ್ತುಗಳಂತೆ ಸರಳವಲ್ಲ,

ವೇದನೆಗಳ ಶುದ್ಧೀಕರಣ..

ರಾಧಿಕಾ

ಹೇಳದೆ ಉಳಿದ ಮಾತುಗಳು

ಹೌದು! ಎಲ್ಲರಿಗೂ ಕೆಲವೊಂದು ಮಾತುಗಳು ಯಾರಿಗೂ ಹೇಳದೇ ತಮ್ಮಲ್ಲೇ ಉಳಿದುಕೊಂಡು ಬಿಡುತ್ತವೆ ಅದು ಸಕಾರಣಕ್ಕೋ ವಿನಾ ಕಾರಣಕ್ಕೋ ಇರಬಹುದೆನ್ನಿ. ಇಂತಹ ತಮ್ಮೊಳಗೇ ಉಳಿಸಿಕೊಂಡ ಮಾತುಗಳು ಯಾವುವೆಂದು ಕಾಲಗತಿಯಲ್ಲಿ ಕೆಲವರಿಗಾದರೂ ಕೆಲವು ಸಮಯ, ಸಂದರ್ಭಗಳಲ್ಲಿ ನೆನಪಿಗೆ ಬಂದಾಗ ಆನಂದವೋ, ಪರಿತಾಪವೋ, ಸಂತಾಪವೋ ಆಗಬಹುದು. ಕಾಲ ಮೀರಿ ಹೋಗಿದ್ದರೆ ಪಶ್ಚಾತ್ತಾಪವೂ ಆಗದಿರದು.
ಆ ಉಳಿದು ಹೋದ ಮಾತುಗಳು ಒಳ್ಳೆಯದೋ, ಕೆಟ್ಟದ್ದೋ ಆಗಿರುವುದಕ್ಕೆ ಜೀವನದಲ್ಲಿ ಸಾಕಷ್ಟು ಉದಾಹರಣೆಗಳು ಸಿಗುತ್ತವೆ.

ಮಾತುಗಳು ಸಂಹವನಕ್ಕಾಗಿ ಪರಸ್ಪರ ಬಳಕೆಯಾಗುತ್ತಿದೆಯಾದರೂ ಮೌನ ಬಂಗಾರ, ಮಾತು ಬೆಳ್ಳಿ ಎನ್ನುವ ನಾಣ್ನುಡಿಯ ಹಿಂದೆ ಹೋದಾಗ ಆಡುವ ಮಾತುಗಳ ತೂಕ, ಆಡುವ ಸಂದರ್ಭ, ಸನ್ನಿವೇಶ, ಬಳಸುವ ಭಾಷೆ ಇವುಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಹೌದಪ್ಪ ಎಂದು ಎಲ್ಲಕ್ಕೂ ತಲೆಯಾಡಿಸುತ್ತಾ ದಿವ್ಯ ಮೌನಕ್ಕೆ ಶರಣಾಗಿ, ತಾವು ಸಭ್ಯರು, ಮಿತ ಭಾಷಿಗರು, ಮೇಧಾವಿಗಳು, ವಿವೇಚನೆಯುಳ್ಳವರು ಎಂಬ ಬಿರುದು ಪಡೆದವರ ಮುಂದೆ ಹೆಚ್ಚು ಮಾತಾಡಿ ವಾಚಾಳಿಗಳು, ಬಾಯಿ ಬಡುಕರು, ತಲೆಹರಟೆ, ಮಾತಿನ ಮಲ್ಲರು ಇತ್ಯಾದಿ ಹಣೆಪಟ್ಟಿಗಳಿಂದ ಪ್ರಸಿದ್ಧರಾದವರೂ ಕಡಿಮೆ ಇಲ್ಲ. ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ ಎನ್ನುವಂತೆ ಮಾತುಗಳನ್ನು ಜಾಣತನದಿಂದ ಸಂಭಾಳಿಸಬಲ್ಲವರು ಎಲ್ಲರಿಗೂ ಪ್ರಿಯವಾಗುತ್ತಾರೆ ಕೂಡ.

ಅಷ್ಟಿಲ್ಲದೆ ಹೇಳುವರೆ "ಮಾತು ಮಾಣಿಕ್ಯರ್ಯ" , "ಮಾತಾಡಿದರೆ ಹೋಯಿತು, ಮುತ್ತು ಚೆಲ್ಲಿದರೆ ಹೋಯಿತು, ಅಡಿಕೆಗೆ ಹೋದ ಮಾನ, ಆನೆ ಕೊಟ್ಟರೂ ಬಾರದು" ಎಂಬ ನಾಣ್ನುಡಿಗಳಂತೆ ಒಮ್ಮೆ ಆಡಿದ ಮಾತುಗಳನ್ನು ಹಿಂದೆ ಪಡೆಯುವುದಾದರೂ ಹೇಗೆ?

ಮಾತುಗಳಿಗೆ ಕಡಿವಾಣ ಹಾಕಿ, ನಿಯಂತ್ರಣದ ನಾಲಿಗೆಯಲ್ಲಿ ವ್ಯವಹರಿಸುವ ಜಾಣರೂ ಕೂಡ ಆಡಲಾಗದ ಮಾತುಗಳನ್ನು ತಮ್ಮೊಳಗೆ ಅಡಗಿಸಿಕೊಂಡು ನಿರಂತರ ಚಡಪಡಿಸಲೂ ಸಾಧ್ಯ. ಗಂಡ ಹೆಂಡಿರ ಮಧ್ಯೆ ಬಂದು ಹೋಗುವ ಸಂಸಾರದ ಕಲಹಗಳಲ್ಲಿ ಪ್ರೀತಿ, ಪ್ರೇಮ, ದ್ವೇಷ, ಸಿಟ್ಟುಗಳ ಮಾತಿನ ಪ್ರವಾಹಗಳಲ್ಲಿ ಸಂಸಾರ ನೌಕೆಯನ್ನು ದಡ ಮುಟ್ಟಿಸುವ ಸಹನೆ ಇಬ್ಬರಲ್ಲೂ ಇಲ್ಲದಿದ್ದರೆ ಅಪಾಯವೇ ಹೆಚ್ಚು. ಭಗ್ನ ಪ್ರೇಮಿಗಳ ವಿಷಯದಲ್ಲಂತೂ ಮಾತುಗಳನ್ನು ಮನದೊಳಗೇ ಹೂತು ಹಾಕಿ ಕೊಂಡವರ ಪಾಡು ದೇವರೇ ಬಲ್ಲ. ಪ್ರಾಣ ಸ್ನೇಹಿತರೆಂದು ಒಪ್ಪಿ ಅಪ್ಪಿಕೊಂಡವರಿಗೂ ಅವರ ಅವಗುಣಗಳನ್ನು ಹೇಳಲಾಗದೆ, ಸ್ನೇಹವನ್ನು ಕಡಿದುಕೊಳ್ಳಲೂ ಇಷ್ಟ ಪಡದೆ ಬಿಸಿ ತುಪ್ಪ ನುಂಗಲೂ, ಉಗುಳಲಲೂ ಆಗದಂತಹ ಪರಿಸ್ಥಿತಿ.

ಹುಟ್ಟಿನ ಮೂಲವನ್ನೇ ಅರಿಯದ ಅದೆಷ್ಟೋ ಅನಾಥ ಮಕ್ಕಳ ನಿಜವಾದ ತಾಯಂದಿರಿಗೆ ತಮ್ಮೊಳಗೇ ಬಚ್ಚಿಟ್ಟುಕೊಂಡ ಸತ್ಯವನ್ನು ಜಗತ್ತಿಗೆ ಬಿಚ್ಚಿ ತೋರಿಸಿ ಬೆತ್ತಲಾಗದೆ ಕೊನೆ ಉಸಿರಿನ ತನಕ ನೋವುಂಡವರನ್ನು ಕಂಡಾಗ ಕುಂತಿಯೂ ಕೊನೆ ಗಳಿಗೆಯವರೆಗೂ ಕರ್ಣನು ತನ್ನ ಮಗನೆಂಬ ಸತ್ಯವನ್ನು ಬಚ್ಚಿಟ್ಟುಕೊಳ್ಳದಿದ್ದರೆ ಕರ್ಣ ದುರ್ಯೋಧನನ ಪರ ನಿಲ್ಲುತ್ತಿರಲಿಲ್ಲವೇನೋ? ಗಂಡನಿಗಾಗಿ ಕಣ್ಣಿಗೆ ಬಟ್ಟೆ ಬಿಗಿದುಕೊಂಡೇ ಇಡೀ ಜೀವನವನ್ನು ಕತ್ತಲಲ್ಲಿ ಕಳೆದ ಗಾಂಧಾರಿಯ ಮನದಾಳದಲ್ಲಿ ಹೂತು ಹೋದ ಮಾತುಗಳೆಷ್ಟೋ? ಹೀಗೆ ಮನಸ್ಸಿನ ಕನ್ನಡಿಗೆ ಮಾತಾಡಲು ಬರುತ್ತಿದ್ದರೆ ಬದುಕು ನಿತ್ಯ ನರಕವಾಗಬಹುದಿತ್ತೆ?

ಆಸ್ಪತ್ರೆಯಲ್ಲಿ ಜೀವನ್ಮರಣ ಜೊತೆ ಹೋರಾಟದಲ್ಲಿದ್ದಾಕೆಯೊಬ್ಬರು ಏನ್ನನ್ನೋ ಹೇಳಲು ಪ್ರಯತ್ನಿಸುತ್ತಲೇ ಇದ್ದರು. ಆ ಸಮಯ ಮಾತಾಡುವಷ್ಟು ಶಕ್ತಿ ಇಲ್ಲದೆ ಕೈ ಬಾಯಿ ಸನ್ನೆಗಳು ಯಾರಿಗೂ ಅರ್ಥವಾಗದೆ ಆಕೆ ತಮ್ಮೊಳಗೇ ಉಳಿಸಿಕೊಂಡ ಮಾತುಗಳೂ ಮಣ್ಣಿನೊಳಗೇ ಹೂತು ಹೋಗಿದ್ದವು.

ಕಳ್ಳರು, ಮೋಸಗಾರರು, ವ್ಯಭಿಚಾರಿಗಳು, ಕೊಲೆಗಾರರೂ ಕೂಡ ಹೇಳಲಾಗದ ಅದೆಷ್ಟೋ ಸತ್ಯಗಳು, ಮಾತುಗಳನ್ನು ತಮ್ಮ ಹಿತ ದೃಷ್ಟಿಯಿಂದ ಬಚ್ಚಿಡುತ್ತಾರೆ. ನ್ಯಾಯ, ಧರ್ಮ, ಕಾನೂನು, ಶಿಕ್ಷೆ ಇತ್ಯಾದಿಗಳ ಸಂಕೋಲೆಗಳನ್ನು ಎದುರಿಸಿಯೂ ಕೂಡ ಹೇಳಲಾಗದ ಮಾತುಗಳು ಅವರೊಳಗೇ ಕೊನೆತನಕ ಉಳಿದು ಬಿಡುತ್ತದೆ. ಇತಿಹಾಸದ ಪುಟಗಳಲ್ಲಿ ಇಂತ ಹಲವಾರು ಸ್ಫೋಟಕ ಸತ್ಯಗಳು ದಾಖಲಾಗದೆ ಉಳಿದ ಪ್ರಕರಣಗಳು ಸಾಕಷ್ಟಿವೆ.

ದಾಂಪತ್ಯದ ಪವಿತ್ರತೆಯನ್ನು ಕಾಪಾಡಬೇಕಾದರೆ ಗಂಡು, ಹೆಣ್ಣುಗಳಿಬ್ಬರೂ ನಿಷ್ಠೆ, ಪ್ರಾಮಾಣಿಕ ನಡವಳಿಕೆ, ಅಗತ್ಯ, ಅವಶ್ಯ ಎಂಬ ನಂಬುಗೆಯ ಬುಡಮೇಲು ಮಾಡುವ ಅದೆಷ್ಟೋ ಗರ್ಭಿತ ರಹಸ್ಯಗಳು ಬಯಲಾಗುವುದೇ ಇಲ್ಲ. ಕ್ಯಾನ್ಸರ್, ಏಡ್ಸ್ ನಂತಹ ಮಾರಕ ಕಾಹಿಲೆಗಳಿಂದ ಬಳಲುವ ರೋಗಿಗಳು ಬದುಕುವ ಭರವಸೆಯನ್ನೇ ಕಳೆದುಕೊಂಡರೂ ಯಾರಿಗೂ ಅದನ್ನು ತಿಳಿಸದಂತೆ ಮುಚ್ಚಿಟ್ಟು ನೋವಿನಿಂದ ನರಳತೊಡಗುತ್ತಾರೆ. ತಮ್ಮವರಿಗೆ ಹೇಳಿ ಹಗುರವಾಗುವುದಕ್ಕಿಂತ ಮುಚ್ಚಿಡುವದೇ ಸುಖ, ಸೂಕ್ತ ಎಂದು ಕೊಳ್ಳುತ್ತಾರೆ.

ಕೊನೆಯದಾಗಿ ಒಂದು ಪ್ರಕರಣವನ್ನು ಉಲ್ಲೇಖಿಸಲೇ ಬೇಕು. ಮನೆಯವರ ವಿರೋಧ ಲೆಕ್ಕಿಸದೆ ಅಂತರ್ಜಾತಿ ವಿವಾಹವಾದ ಮಗನೊಬ್ಬ ತಂದೆ ತಾಯಿಗಳಿಂದ ದೂರವಾಗಿದ್ದ. ಪುಟ್ಟ ಮಗುವಿನ ತಂದೆಯಾದ ಸುದ್ದಿ ಹೆತ್ತವರಿಗೆ

ತಲುಪಿಸಿದಾಗಲೂ ಅವನನ್ನು ಸ್ವೀಕರಿಸಲು ಅವರು ಮುಂದೆ ಬರಲೇ ಇಲ್ಲ. ತಾಯಿ ಹೃದಯ ಕರಗಿ ಮಗ, ಮೊಮ್ಮಗನಿಗಾಗಿ ಹಂಬಲಿಸುತ್ತಲೇ ಇತ್ತು. ಹಠ ಸಾಧಿಸುವ ನಟನೆಯಲ್ಲೇ ಮುಳುಗಿದ್ದ ತಂದೆಯ ಮನೆಗೆ ಕೊನೆಗೂ ಆ ಮಗ ಕರೆಯದೇ ಬರುವಂತಾಗಿದ್ದು ವಿಧಿಯ ಆಟದಿಂದ. ರಸ್ತೆ ಅಪಘಾತದಲ್ಲಿ ತೀರಿಕೊಂಡ ಮಗನ ಶವ ಮನೆ ಬಾಗಿಲಲ್ಲಿ ಇಟ್ಟುಕೊಂಡು ರೋಧಿಸುತ್ತಿದ್ದ ತಂದೆ ಮಗನನ್ನು ಕ್ಷಮಿಸಲು ಎಂಥ ದೊಡ್ಡ ತ್ಯಾಗಕ್ಕೆ ಸಿದ್ಧರಾಗಬೇಕಾಯಿತು ನೋಡಿ.

ಮೀಟೂ ಅಂದೋಲಿನದಿಂದಾಗಿ ದೌರ್ಜನ್ಯಕ್ಕೆ ಒಳಗಾಗಿ ಅಸಹಾಯಕತೆಯಿಂದ, ನೋವಿನಿಂದ ಜೀವನವಿಡೀ ತಮ್ಮೊಳಗೇ ಬಚ್ಚಿಟ್ಟುಕೊಂಡ ಅನ್ಯಾಯದ ಸಂಗತಿಗಳನ್ನು ಹೇಳಲು ಮುಂದೆ ಬಂದವರೂ ಕೂಡ ತಾವು ಹೇಳಿ ಮತ್ತಷ್ಟು ಬೆತ್ತಲಾದೆವಲ್ಲ ಎನಿಸುವಷ್ಟು ಸಮಾಜದ ನೀರಸ ಪ್ರತಿಕ್ರಿಯೆಯಿಂದ ಮೌನಕ್ಕೇ ಮತ್ತೆ ಶರಣಾದರೆ ಆಶ್ಚರ್ಯವಿಲ್ಲ.

ನಾಗರತ್ನ ಚಂದ್ರಶೇಖರ

ಕಣ್ಮಣಿ

ಓ ನನ್ನ ಕಣ್ಣೊಳಗಿನ ಅಮೂಲ್ಯ ಕಣ್ಮಣಿ ಮಸೂರವೇ

ಇದೋ ಹಾಡುವೆನು ನಾ ನಿನಗೆ ಚರಮ ಗೀತೆ

ತಾಯ ಗರ್ಭದಲೇ ನನ್ನ ಕಣ್ಣೊಳಗೆ ಕುಳಿತೆ

ನನ್ನ ಜೊತೆಗೇ ನೀನು ಧರೆಗಿಳಿದು ಬಂದೆ

ತಂದೆ ತಾಯಿಯರ ಮೊಗವೆನಗೆ ಪರಿಚಯಿಸಿದೆ

ಹಲವು ಹತ್ತಾರು ಅಚ್ಚರಿಗಳ ತೋರಿಸಿದೆ

ಮುದ್ದಾದ ಅಕ್ಷರಗಳ ನೀ ನನಗೆ ಕಲಿಸಿದೆ

ಪದವಿಗಳ ಗಳಿಕೆಯಲಿ ನನ್ನ ಜೊತೆಯಾದೆ

ಉದ್ಯೋಗದುದ್ದಕ್ಕೂ ಸಹಕಾರ ನೀಡಿದೆ

ದೇಶ ವಿದೇಶಗಳ ನೋಟಗಳ ತೋರಿಸಿದೆ

ನನ್ನ ಜೊತೆಗೇ ನೀನು ಮಾಗಿ ಮುದಿಯಾದೆ
ನಿನ್ನ ಮೇಲೆ ಮುಸುಕು ಆವರಿಸಿದನು ತಿಳಿದೆ
ಇನಿತು ದಯವಿಲ್ಲದೆ ನಿನ್ನ ತುಂಡರಿಸಿ ಬಿಸಾಡಿದೆ
ಬೇರೊಂದು ಕಣ್ಮಣಿಯ ನಿನ್ನ ಜಾಗದಲಿರಿಸಿದೆ
ನನಗೆಲ್ಲವನೂ ಕಾಣಿಸಿದ ನಿನ್ನ ನಾ ಕಾಣದಾದೆ
ರಸ ಉಣಿಸಿದ ನಿನ್ನನ್ನು ಕಸದ ಬುಟ್ಟಿಗೆ ಎಸೆದೆ
ನಿನ್ನ ಕ್ಷಮೆ ಕೇಳಲೂ ಇಲ್ಲ ನನಗೆ ಇನಿತು ಅರ್ಹತೆ
ಈ ಚರಮಗೀತೆಯೇ ನಾ ನಿನಗೆ ಸಲ್ಲಿಸುವ ಕೃತಜ್ಞತೆ

ಜಿ.ವಿ.ನಿರ್ಮಲ

ನಗೆ ಕಿಡಿಗಳು

ಸಾಮಾನ್ಯವಾಗಿ ನಗೆ ಹನಿಗಳು ಎಂಬ ಮಾತು ಉಪಯೋಗಿಸುತ್ತೇವೆ. ಇಲ್ಲಿಯ ಕೆಲವು ಗಂಭೀರ ಹನಿಗಳಾದ ಕಾರಣ ನಗೆ ಕಿಡಿಗಳು ಎಂಬ ಶಬ್ಧ ಬಳಸಿರುವೆ.

1. ಮಾರವಾಡಿಗಳು ವ್ಯವಹಾರ ಚತುರರು. ರಾಜಸ್ಥಾನದಿಂದ ದೇಶದೆಲ್ಲೆಡೆ ಹೋಗಿ ಆಯಾ ಸ್ಥಳೀಯರೊಂದಿಗೆ ಹೊಂದಿಕೊಂಡು ಹೋಗಿಬಿಡುತ್ತಾರೆ. ಸ್ಥಳೀಯರೊಂದಿಗೆ ಬಾಂಧವ್ಯವಿದ್ದರೂ ಅವರು ತಮ್ಮ ಮಾರವಾಡಿ ಬಂಧುಗಳನ್ನೇ ನಂಬುತ್ತಾರೆ. ಒಬ್ಬ ಮಾರವಾಡಿ ಅಂಗಡಿಯಿಂದ ಬೇರೆ ಕೆಲಸಕ್ಕೆ ಹೊರಗೆ ಹೋಗಬೇಕಾದರೆ ತಮ್ಮ ನೌಕರನಿಗೆ ಅಂಗಡಿಯತ್ತ ಲಕ್ಷ ವಹಿಸಲು ಹೇಳುತ್ತಾನೆ, ಮತ್ತು ಎದುರು ಅಂಗಡಿಯ ಮಾರವಾಡಿಗೆ ತನ್ನ ನೌಕರನ ಮೇಲೆ ಲಕ್ಷ ಇರಿಸಲು ತಿಳಿಸುತ್ತಾನೆ. ವಾಪಸ್ಸು ಬಂದ ಮೇಲೆ ನೌಕರನ ಬಳಿ ಅಂಗಡಿಯ ಬಗ್ಗೆ ವಿಚಾರಿಸುತ್ತಾನೆ, ಮತ್ತು ಎದುರು ಅಂಗಡಿಯ ಮಾರವಾಡಿ ಬಳಿ ತನ್ನ ನೌಕರನ ಬಗ್ಗೆ ವಿಚಾರಿಸುತ್ತಾನೆ.

2. ಇದು ಐ. ಪಿ. ಎಲ್ ಜಮಾನಾ, ಎಲ್ಲರಿಗೂ 5 ದಿನಗಳ ಟೆಸ್ಟ್ ಮ್ಯಾಚ್ ನೋಡಲು ಬೇಸರ, ಆಟಗಾರರಿಗೂ ಅಷ್ಟೇ 20- 20 ಆಟವೇ ಬೇಕು. ಐದು ದಿನದ ಹಣ ಒಂದೇ ದಿನ ಸಂಪಾದಿಸಬೇಕು. ಒಂದು ದಿನ ಒಬ್ಬರ ಮನೆಗೆ ಹೋಗಿದ್ದೆ, ಅಲ್ಲಿ ವಯಸ್ಸಾದ ಯಜಮಾನ್ರು ಐ. ಪಿ. ಎಲ್. ನೋಡುತ್ತಲಿದ್ದರು. ಬಾಲ್ ಹಾಕಲು ಬಂದಾಗ ಕಮ್ ಆನ್ ಕ್ಲೀನ್ ಬೋಲ್ಡ್ ಮಾಡು, ಸ್ಟಂಪ್ ಮೇಲೆ ಹಾಕು ಎಲ್. ಬಿ. ವಿಕೆಟ್ ತಗೋ, ಎಂದು ಹುರುದುಂಬಿಸಿದರೆ, ಮರು ಕ್ಷಣ ಬ್ಯಾಟ್ ಬೀಸುವವನಿಗೆ ಲಗಾಯಿಸು ಸಿಕ್ಸ್ ಹೊಡಿ, ಇಲ್ಲ ಬೌಂಡರಿ ಹೊಡಿ ಎಂದು ಅನ್ನುತ್ತಲಿದ್ದರು.

ನಾನು " ಯಜಮಾನರೇ, ನೀವು ಬಾಲಿಂಗ ಸೈಡ್, ಬ್ಯಾಟಿಂಗ್ ಸೈಡ್ ಇಬ್ಬರಿಗೂ ಸ್ಫೂರ್ತಿ ನೀಡ್ತಾ ಇದ್ದೀರಿ, ನೀವು ಯಾವ ಪಕ್ಷ ಬ್ಯಾಟಿಂಗೋ, ಬಾಲಿಂಗೋ " ಅಂದೆ.

ಅವರು " ಇಲ್ಲಪ್ಪ ನಾನು ಯಾವ ಪಕ್ಷಕ್ಕೂ ಸೇರಿಲ್ಲ. ವಿಕೆಟ್ ಬಿದ್ದರೆ, ಇಲ್ಲವೇ ಬೌಂಡರಿ ಹೊಡೆದರೆ ಅಥವಾ ಸಿಕ್ಸ್ ಎತ್ತಿದರೆ ಮಾತ್ರ ಆ ಚೀಯರ್ ಗರ್ಲ್ಸ್ ಬಂದು ಕುಣೀತಾರೆ,ನಾನು ಅವರನ್ನು ನೋಡಬೇಕು, ಅದಕ್ಕೆ ಇಬ್ಬರಿಗೂ ಸಪೋರ್ಟ್ ಮಾಡ್ತೀನಿ ಅಷ್ಟೇ. " ಅಂದರು.

3. ಮಹಾರಾಷ್ಟ್ರದಲ್ಲಿ ಅತಿವೃಷ್ಟಿಯಾಗಿ, ನದಿಗಳು ತುಂಬಿ ಹರಿದು ನೆರೆ ಬಂದು ಬಹಳ ಜನ ಸಂತ್ರಸ್ತರಾದರು. ಆಗ ರಾಜ್ಯ ಸರಕಾರದ ಉದ್ಯೋಗಿಗಳು ತಮ್ಮ ಒಂದು ದಿನದ ಸಂಬಳ ಸಂತ್ರಸ್ತರಿಗೆ ಕೊಡುವುದಾಗಿ ಘೋಷಣೆ ಮಾಡಿದರು. ಸಂತ್ರಸ್ಥರ ಮುಖಂಡರು ಒಂದು ದಿನದ ಸಂಬಳ ಸ್ವೀಕರಿಸಲು ಒಪ್ಪಲಿಲ್ಲ.. ಅವರು "ನಮಗೆ ನಿಮ್ಮ ಒಂದು ದಿನದ ಸಂಬಳ ಬೇಡ, ಅದು ಜುಜುಬಿ, ನಮಗೆ ನಿಮ್ಮ ಒಂದು ದಿನದ ಮೇಲು ಸಂಪಾದನೆ ಕೊಡಿ" ಎಂದು ಬೇಡಿಕೆ ಇರಿಸಿದರು.

4. ಗುರುಗಳು ಪ್ರವಚನದಲ್ಲಿ ಒಂದು ಸುಳ್ಳು ನಿಮ್ಮ ಆಯಸ್ಸಿನ ಐದು ನಿಮಿಷ ಕಡಿಮೆ ಮಾಡುತ್ತದೆ, ಹಾಗೂ ಒಂದು ನಗು ನಿಮ್ಮ ಆಯಸ್ಸು ಹತ್ತು ನಿಮಿಷ ಜಾಸ್ತಿ ಮಾಡುತ್ತದೆ. ಎಂದು ವ್ಯಾಪಾರಿಗಳ ಸಭೆಯಲ್ಲಿ ಹೇಳಿದರು. ಅಂದಿನಿಂದ ವ್ಯಾಪಾರಿಗಳು ನಗು ನಗುತ್ತಲೇ ಸುಳ್ಳು ಹೇಳಿ ಒಂದೊಂದು ಸಲಕ್ಕೂ ಸುಳ್ಳುಹೇಳಿ 5 ನಿಮಿಷ ಕಳೆದುಕೊಂಡು ಅದನ್ನು ನಗುತ್ತ ಹೇಳಿ 10 ನಿಮಿಷ ಸಂಪಾದಿಸಿ, ಒಂದೊಂದು ವ್ಯವಹಾರದಲ್ಲೂ ಆಯಸ್ಸಿಗೆ ಐದು ನಿಮಿಷ ಲಾಭ ಮಾಡಿಕೊಳ್ಳುತ್ತಿದ್ದಾರೆ

5. ನಮ್ಮ ದೇಶದಲ್ಲಿ ಪ್ರಾಮಾಣಿಕರ ಸಂಖ್ಯೆ ಜಾಸ್ತಿ. ಸಿಕ್ಕು ಹಾಕಿಕೊಳ್ಳುವವರೆಗೆ ಎಲ್ಲರೂ ಪ್ರಾಮಾಣಿಕರೇ. ದೋಬಿ ಬಟ್ಟೆ ಕೊಟ್ಟು ಹೋದಮೇಲೆ ಅವುಗಳ ಲೆಖ್ಖ ಹಾಕಿದ ಗಂಡ, ಒಳಗಿದ್ದ ಹೆಂಡತಿಗೆ ಕೂಗಿ ಹೇಳಿದ "ಲೇ, ದೋಭಿ ಒಂದು ಟವೆಲ್ ಎಗರಿಸಿದ್ದಾನೆ ". ಹೆಂಡತಿ ಅಲ್ಲಿಂದಲೇ " ಯಾವುದು ನೀವು ಸೆಮಿನಾರಿಗೆ ಹೋದಾಗ ವೆಸ್ಟ್ ಎಂಡ ದಲ್ಲಿ ಎಗರಿದ್ದೋ, ತಾಜ್ ಹೋಟೆಲ್ ನಿಂದ ಎತ್ತಿ ಹಾಕಿದ್ದೋ, ಯಾವುದು ಮಿಸ್ ಆಗಿದೆ. " ಎಂದು ವಿಚಾರಿಸಿದಳು.

6. ಒಂದು ದಿನ ಗಂಡ ಹೆಂಡತಿ ಕುಳಿತಿದ್ದೆವು. ಪೇಪರ್ ಓದುತ್ತಿದ್ದ ಹೆಂಡತಿ " ರೀ, ಕಂಪ್ಲೀಟ್ ಮತ್ತು ಫಿನಿಶ್ ಎರಡೂ ಒಂದೇ ಅಲ್ವಾ? ಇಲ್ಲಿ ಒಮ್ಮೆ ಕಂಪ್ಲೀಟ್, ಇನ್ನೊಮ್ಮೆ ಫಿನಿಷ್ ಉಪಯೋಗಿಸಿದ್ದಾರೆ. " ಅಂದಳು.

ನಾನು " ಅಲ್ಲ ಎರಡೂ ಒಂದೇ ಅಲ್ಲ, ಈಗ ನೋಡು ನೀನು ನನ್ನನ್ನು ಮದುವೆಯಾದೆ, ನಿನ್ನ ಬಯಕೆ ಕಂಪ್ಲೀಟ್ ಆಯಿತು. ಆದರೆ ನಾನು ಫಿನಿಷ್ ಆದೆ.

7. ಒಂದು ಸ್ಪರ್ಧೆಯಲ್ಲಿ ನಾನು ಮೊದಲನೇ ನಂಬರ್ ಬರುವ ಬಗ್ಗೆ ನನಗೆ, ನಮ್ಮ ತಂದೆಗೆ ಇಬ್ಬರಿಗೂ ಭರವಸೆ ಇತ್ತು. ನಾನು ಎರಡನೇ ನಂಬರ್ ಬಂದೆ, ನಮ್ಮ ತಂದೆ " ಏನಾಯಿತೋ, " ಅಂದರು ನಾನು ಬೇಸರದಲ್ಲಿ " ಎರಡು, ಮೊದಲನೆಯದು ಬೇರೆಯವರದು " ಅಂದೆ. ಅವರು " ಒಹ್, ಎರಡಾ, ಅದು ಒಂದಕ್ಕಿಂತ ದೊಡ್ಡದು ಅಲ್ಲವೇ, ಅದನ್ನೇಕೆ ಬೇಸರದಿಂದ ಹೇಳ್ತೀಯ " ಅಂದರು

8. ನನ್ನ ಮದುವೆಯಾಗಿ ಕೆಲವು ವರ್ಷಗಳಾದವು. ಮದುವೆಯ ದಿನ ಫುಲ್ ಮೇಕಪ್ಪಿನಲ್ಲಿದ್ದ ಹೆಂಡತಿಯನ್ನು ಕಂಡು ಬ್ರಹ್ಮಾನಂದವಾಗಿ ಹುಚ್ಚು ಹಿಡಿದಂತಾಯ್ತು. ಮರುದಿನ ಮೇಕ್ ಅಪ್ ಇಲ್ಲದ ಆಕೆಯನ್ನು ನೋಡಿ ಭ್ರಮನಿರಸನವಾಗಿ ನಿಜವಾಗಿ ಹುಚ್ಚು ಹಿಡಿದಂತಾಯಿತು. ಹೆಂಡತಿಗೆ " "ನಿನ್ನೆ ನೀನು ಬಹಳ ಅಂದವಾಗಿದ್ದೆ, " ಅಂದೆ. ಆಕೆ " ಆ ಶ್ರೇಯಸ್ಸು ಆ ಬ್ಯೂಟಿ ಪಾರ್ಲರ್ ಗೆ ಸಲ್ಲಬೇಕು. " ಅಂದಳು. ನಾನು ಆ ಬ್ಯೂಟಿ ಪಾರ್ಲರ್ ವಿಳಾಸ ಕೊಡು, ಅವರಿಗೊಂದು ಗಿಫ್ಟ್ ಕೊಡಬೇಕು " ಎಂದು ಹೇಳಿ ವಿಳಾಸ ಪಡೆದೆ. ಒಂದು ಆಪಲ್ ಫೋನ್ ಡಬ್ಬದೊಡನೆ ಹೋಗಿ ಪಾರ್ಲರ್ ಒಡತಿಗೆ ಕೊಟ್ಟೆ, ಆಕೆಗೆ ತುಂಬಾ ಖುಷಿ, ಆಪಲ್ ಫೋನಿಗಾಗಿ ಡಬ್ಬ ತೆಗೆದಳು ಒಳಗೆ ಹಳೆಯ, ಉಪಯೋಗಿಸಿ ಬಿಟ್ಟ ಬೇಸಿಕ್ ಮಾಡೆಲ್ ದಪ್ಪದ ನೋಕಿಯಾ ಫೋನ್ ಇತ್ತು, ಆಕೆ " ಇದು ಮೋಸ " ಅಂದಳು, ನಾನು " ನಿನ್ನೆ ನೀವು ನನಗೆ ಇದನ್ನೇ ಮಾಡಿದ್ದಿರಿ " ಎಂದು ಹೇಳಿ ಬಂದ

9. ಮದುವೆಯಾದ ಗಂಡಸರ ಕಷ್ಟ ಹೇಳತೀರದು. ಹೆಂಡತಿ ಶಾಪಿಂಗ ಅಂತಾ ಮಾಲುಗಳಿಗೆ ಕರೆದುಕೊಂಡು ಹೋಗ್ತಾಳೆ. ಅಲ್ಲಿಯ ಮಾಲಿನ ದರ ನೋಡಿ,ಗಾಬರಿಯಾಗಿ, ಚೌಕಾಸಿ ಮಾಡಲಾಗದೆ ಕೊನೆಗೆ ಪಾದಚಾರಿ ಮಾರ್ಗದಲ್ಲಿ ಚಪ್ಪಲಿ ಕೊಂಡು ತರುತ್ತಾಳೆ.

10. ಅಮಿತಾಬ್ ಬಚ್ಚನ್ ಕಲ್ಯಾಣ ಜ್ಯುವೆಲ್ಲರ್ಸ್ ಜಾಹೀರಾತು ರಾಯಭಾರಿ. ಹಲವಾರು ಬಗೆಯ ಆಭರಣಗಳನ್ನು ತೋರಿಸಿ, ಒಳ್ಳೆ ಮೇಕ್, ಕಡಿಮೆ ಬೆಲೆ ಇಂದೇ ಕೊಳ್ಳಿರಿ, "ಎಂದು ಹೇಳುತ್ತಾರೆ. ಸ್ವಲ್ಪು ಸಮಯದ ನಂತರ ಮುಂದಿನ ಜಾಹೀರಾತು ಅಟಿಕಾ ಗೋಲ್ಡ ಕಂಪನಿಯದು ಅಲ್ಲಿಯೂ ಅಮಿತಾಬ್ ಜಾಹೀರಾತು " ನಿಮಗೆ ಅಟಿಕಾ ಗೋಲ್ಡ್ ಕಂಪನಿಯವರು ನಿಮ್ಮ ಬಂಗಾರಕ್ಕೆ ಒಳ್ಳೆ ಬೆಲೆ ಕೊಡ್ತಾರೆ, ಇಲ್ಲಿ ನಿಮ್ಮ ಬಂಗಾರ ಮಾರಾಟ ಮಾಡಿ "ಎಂದು ಶಿಫಾರಸು ಮಾಡುತ್ತಾರೆ.

11. ಕೊರೋನಾ ಬಂದ ನಂತರ ಜಾಹೀರಾತು ಗಳ ಸ್ವರೂಪ ಬದಲಾಗಿದೆ. ಈಗ ಎಲ್ಲದರಲ್ಲಿಯೂ ಆಯುರ್ವೇದದ ಪ್ರಸ್ತಾಪ ಇರುವುದು. ಸೋನಾಕ್ಷಿ ಸಿನ್ಹಾ ಟೂತ್ ಪೇಸ್ಟ್ ಹಿಡಿದು ನಗುತ್ತಾ ಮೋಡಿ ಮಾಡಿ, ಇದರಲ್ಲಿ ಲವಂಗ, ಚಕ್ಕಿ ಇದೆ, ಇದನ್ನೇ ಉಪಯೋಗಿಸಿ ಅನ್ನುತ್ತಾಳೆ. ಕರೀನಾ ಇನ್ನೊಂದು ಬ್ರಾಂಡ್ ಟೂತ್ ಪೇಸ್ಟ್ ಹಿಡಿದು ಇದರಲ್ಲಿ ಇಜ್ಜಲು, ಉಪ್ಪು ಸ್ಪಟಿಕ ಇದೆ, ತಪ್ಪದೆ ಉಪಯೋಗಿಸಿ ಎಂದು ತನ್ನ ಬಿಳಿ ಹಲ್ಲು ತೋರಿಸುವಳು. ಅನಂತರ ಬರುವ ಪ್ರಿಯಾಂಕಾ ತನ್ನ ಎಲ್ಲ ಹಲ್ಲು ತೋರಿ ಇದು ಉಪಯೋಗಿಸಿ ಇದರಲ್ಲಿ ಬೇವಿನ ಎಣ್ಣೆ ಇದೆ ಅನ್ನುತ್ತಾಳೆ. ಕೊನೆಗೆ ಹೀರೋ ಬರುತ್ತಾನೆ, ನಿಮ್ಮ ಹಲ್ಲು ನಿಮ್ಮ ಸಂಪತ್ತು ಜಾಹಿರಾತಿಗೆ ಮರುಳಾಗಬೇಡಿ, ಇದು ನನ್ನ ಬ್ರಾಂಡ್ ಇದು ತಕ್ಕೊಳ್ಳಿ. ಹಲ್ಲು ಬೀಳುವವರೆಗೂ ಗಟ್ಟಿಯಾಗಿರುತ್ತವೆ. " ಅನ್ನುತ್ತಾ ಅವನೊಂದು ಬೇರೆ ಪೇಸ್ಟ್ ತೋರಿಸುತ್ತಾನೆ.

12. ಮೊನ್ನೆ ಯಾರೋ ದೂರದಿಂದ ಭೇಟಿಗೆ ಬಂದಿದ್ದರು. ನಾನು ಅವರ ಹೆಸರೇನು? ಎಂದು ಕೇಳಿದೆ. ಅವರು "ನೀಲಿ ಲಕ್ಷ್ಮಣ " ಅಂದರು. ನಾನು " ಇದೇನು ನಿಮ್ಮ ಹೆಸರು ಹೀಗೆ ಇದೆ, ಹೀಗೂ ಹೆಸರು ಇರುತ್ತವೆಯಾ?, " ಅಂದಾಗ ಅವರು " ಯಾಕೆ ಇರೋಲ್ಲ, ಹಳದಿ ರಾಮ್, ಇಲ್ಲವಾ? , ನಾನು ಅವರ ತಮ್ಮ, ನೀಲಿ ಲಕ್ಷ್ಮಣ " ಎಂದು ಹೇಳಿದರು.

13. ಮೋದಿ 2014 ರಲ್ಲಿ ಅಧಿಕಾರಕ್ಕೆ ಬಂದಾಗ ಹೇಳಿದ್ದೇ ಒಂದು, ಈಗ ಮಾಡ್ತಾ ಇರೋದು ಮತ್ತೊಂದು, ಆಗ ನಾನೂ ತಿನ್ನೋದಿಲ್ಲ, ಬೇರೆಯವರಿಗೂ ತಿನ್ನಲು ಬಿಡುವದಿಲ್ಲ " ಇಷ್ಟೇ ಹೇಳಿದ್ದು, ಅವರು " ಈ ಮುಂಚೆ ತಿಂದುದನ್ನು ಕಕ್ಕಿಸುತ್ತೇನೆ " ಅಂದಿರಲಿಲ್ಲ. ಈಗ ನೋಟ್ ಬ್ಯಾನ್, ವರಮಾನ ತೆರಿಗೆ ಇಲಾಖೆ, ಎನ್ಫೋರ್ಸ್ಮೆಂಟ್ ಇಲಾಖೆಗಳ ಮೂಲಕ ತಿಂದಿದ್ದು ಕಕ್ಕಿಸುತ್ತಿದ್ದಾರೆ.

ವಿಠಲ್. ಇಜೇರಿ.

ಪ್ರಾಚಾರ್ಯ ಎಚ್ಚೆಸ್ಕೆ ಅವರ ಪ್ರಬಂಧ - ಅಸ್ಪೃಶ್ಯತೆ

ಎಚ್ಚೆಸ್ಕೆ ಅವರ ಪ್ರಬಂಧ ಸಂಕಲನಗಳೆಂದರೆ - ಕಳ್ಳ ಹೊಕ್ಕ ಮನೆ, ಜೇಡನ ಬಲೆ, ಮೋಡದ ಮಾಯೆ, ಸುರಹೊನ್ನೆ, ಮೇಘಲಹರಿ, ಚೆಂಡು ಹೂ ಗೊಂಡೆ, ಹಾಗೂ ಚಂದ್ರಕಾಂತಿ. ಎಲ್ಲಾ ಪ್ರಬಂಧ ಸಂಕಲನಗಳಲ್ಲಿನ ಒಟ್ಟು ಪ್ರಬಂಧಗಳು 157. ಇವುಗಳಲ್ಲಿ ಬಹುತೇಕ ಪ್ರಬಂಧಗಳು ಶ್ರೇಷ್ಠ ಮಟ್ಟದ್ದಾಗಿದ್ದು ಓದುಗರ ಮನದಲ್ಲಿ ಚಿಂತನ ಮಂಥನವನ್ನುಂಟು ಮಾಡುವುದರಲ್ಲಿ ಸಂಶಯವಿಲ್ಲ. ಈ ಪ್ರಬಂಧಗಳನ್ನು ಓದಿದವರಿಗೆ ಅದರಲ್ಲಿರುವ ಆಲೋಚನಾನುಭವಗಳು ಅವರ ಹೃನ್ಮನಗಳನ್ನು ತಟ್ಟುವುದಲ್ಲದೆ ಹೊಸ ಭಾವನೆಗಳು ಸ್ಫೋಟಗೊಳ್ಳುವುದು. ಅಲ್ಲದೆ ಓದುಗರಿಗೆ ಸುಖ ಸಂತೋಷದೊಂದಿಗೆ ಜ್ಞಾನಾನಂದವೂ ಲಭಿಸುತ್ತವೆ. ಇಲ್ಲಿನ ಪ್ರಬಂಧಗಳಲ್ಲಿ ಜೀವನ ಮೌಲ್ಯಗಳಿವೆ, ಹಾಸ್ಯ ಪ್ರಸಂಗಗಳಿವೆ, ನೀತಿ ಸಿದ್ಧಾಂತಗಳಿವೆ,

ವ್ಯಂಗ್ಯ ಚಿತ್ರಗಳಿವೆ, ವಿಡಂಬನೆಗಳಿವೆ, ಸಾಂಸಾರಿಕ ಕ್ಲೇಶ ಸಮಸ್ಯೆಗಳಿವೆ, ಮಾನವನ ದೋಷ ದೌರ್ಬಲ್ಯಗಳಿವೆ, ಆಚಾರ ವಿಚಾರಗಳಿವೆ ಹಾಗೂ ಲೋಕಾನುಭವಗಳ ರಾಶಿಯೇ ಇದೆ.

ಪ್ರಬಂಧಗಳು ವೈವಿಧ್ಯಪೂರ್ಣವಾಗಿ ಪ್ರಾರಂಭವಾಗುವುದು. ಕೆಲವು ತಾತ - ಮೊಮ್ಮಗನ ಸಂಭಾಷಣೆಯೊಂದಿಗೆ ಪ್ರಾರಂಭವಾದರೆ, ಮತ್ತೆ ಕೆಲವು ಪ್ರಬಂಧದಲ್ಲಿನ ನಾಯಕನ ಹಗಲುಗನಸುಗಳ ಮೂಲಕ ಆರಂಭವಾಗುವುದು. ಅತೀ ಚಿರಪರಿಚಿತವಾದ ವಿಷಯಗಳನ್ನು ಆರಿಸಿಕೊಂಡು ಅದನ್ನು ವಿವರಿಸುತ್ತಾ ಪ್ರಾಚಾರ್ಯ ಎಚ್ಚೆಸ್ಕೆ ಅವರು ಮುಖ್ಯ ಮಾರ್ಗದಿಂದ ಕವಲು ದಾರಿಯನ್ನು ಅನೇಕ ಬಾರಿ ಪ್ರವೇಶಿಸಿದರೂ ಕೊನೆಗೆ ಮರೆಯದೆ ಹೆದ್ದಾರಿಗೇ ಮರಳುವ ಚಾಕಚಕ್ಯತೆಯನ್ನು ನಾವು ಕಾಣಬಹುದು. ಮೂಗು, ಗಡಿಯಾರಗಳು, ನೊಣ, ನಗು, ಸೀಮಾಪುರುಷರು, ಹೆಂಡತಿಯ ಹೆಸರು, ಗಾಸಿಪ್ಪು, ಕಾಗೆ ಪುರಾಣ, ಅನ್ನ ನಿಂದೆ ಇವುಗಳು ನವ್ಯ ಶೈಲಿಯ ಪ್ರಬಂಧನೆಗಳಿಗೆ ಹೆಸರಿಸಬಹುದಾದದ್ದು. ಒಟ್ಟಾರೆ ಬಹುತೇಕ ಪ್ರಬಂಧಗಳು ದ್ರಾಕ್ಷಾಪಾಕವಾಗಿದ್ದು ಎಲ್ಲವೂ ನವಪೀಳಿಗೆಗೆ ಪ್ರಾಚಾರ್ಯರ ಅನನ್ಯವಾದ ಕೊಡುಗೆ.

ಇಂದು ನಾನು ನಿಮ್ಮ ಮುಂದೆ ಪ್ರಾಚಾರ್ಯ ಎಚ್ಚೆಸ್ಕೆ ಚಂದ್ರಕಾಂತಿ ಪ್ರಬಂಧ ಸಂಕಲನದಿಂದ ಒಂದು ಕಿರು ಲಲಿತ ಪ್ರಬಂಧ - ಅಸ್ಪೃಶ್ಯತೆ - ಇದನ್ನು ಸಾಂದ್ರೀಕರಿಸಿ ಪ್ರಸ್ತುತಿಪಡಿಸುವೆ.

ಅಸ್ಪೃಶ್ಯತೆ ಮಹಾ ದ್ರೋಹ. ಹುಟ್ಟಿನ ಕಾರಣದಿಂದಾಗಿ ಅಥವಾ ಕಸುಬಿನ ಕಾರಣದಿಂದಾಗಿ ಒಬ್ಬ ಮೇಲು ಇನ್ನೊಬ್ಬ ಕೀಳು ಎಂದು ಪರಿಗಣಿಸುವುದು ದೊಡ್ಡ ಪಾಪ. ವಿಚಾರವಾದಿಗಳೆಲ್ಲ ಈ ಮಾತನ್ನು ಒಪ್ಪುತ್ತಾರೆ. ವಿವೇಕಿಗಳಾದ ನಮ್ಮ ನಾಯಕರು ಅಸ್ಪೃಶ್ಯತೆ ದಂಡಾರ್ಹವೆಂದು ಶಾಸನ ಮಾಡಿದ್ದಾರೆ.

ಹುಟ್ಟಿನಿಂದ ಪ್ರತಿಯೊಬ್ಬನೂ ಶೂದ್ರ. ಸಂಸ್ಕಾರದಿಂದ ಅವನು ಬ್ರಾಹ್ಮಣನಾಗಬೇಕು. ಬೆಳಕಿನ ಕಡೆಗೆ, ಜ್ಞಾನದ ಕಡೆಗೆ, ಬ್ರಹ್ಮದ ಎಡೆಗೆ ಸಾಗುವುದೇ ಬ್ರಾಹ್ಮಣ್ಯ. ಇದೇ ನಿಜವಾದ ಸಾಧನೆ.

ಆದರೆ ಆತ್ಮನಿಗೂ ದೇಹಕ್ಕೂ ಈರುಳ್ಳಿಯ ಪದರಗಳ ಹಾಗೆ ನಾನಾ ಬಗೆಯ ಆವರಣಗಳು ಅಂಟಿಕೊಳ್ಳುತ್ತವೆ. ಇದರಿಂದಾಗಿ ತಾತ್ಕಾಲಿಕವಾಗಿ ಎಲ್ಲರೂ ಹೊಲೆಯಾಗಬಹುದು. ಬಾಹ್ಯಶುದ್ಧಿಯಿಂದ ದೇಹದ ಹೊರಗೂ, ಉಪವಾಸ ವಿರೇಚನಾದಿಗಳಿಂದ ದೇಹದ ಒಳಗೂ ಶುದ್ಧಿ ಮಾಡಿಕೊಳ್ಳುವುದು ಸಾಧ್ಯ. ನಿಜವಾದ ಅಂತರಂಗಶುದ್ಧಿಗೆ ದೀರ್ಘವಾದ ಪ್ರಯತ್ನವೇ ಅಗತ್ಯವಾಗುತ್ತದೆ.

ಯಾವುದೋ ಕಾಲದಲ್ಲಿ ಬಿತ್ತಲಾದ ಈ ವಿಷಬೀಜದ ಕಳೆಯನ್ನು ತೆಗೆದುಹಾಕಲು ನಮ್ಮ ಮಹಾನ್ ಚಿಂತಕರೂ ಸಮಾಜಸುಧಾರಕರೂ ಎಂದಿನಿಂದಲೂ ಪ್ರಯತ್ನ ನಡೆಸಿದ್ದಾರೆ. ಬುದ್ಧ, ಶಂಕರ, ರಾಮಾನುಜ, ಬಸವ, ಗಾಂಧಿ ಮುಂತಾದವರೂ ಈ ಪದ್ಧತಿಯ ವಿರುದ್ಧ ತೀರ್ಪುನುಡಿದಿದ್ದಾರೆ. ಆದರೂ ಮನಸ್ಸಿನಾಳದಲ್ಲಿ ಬೇರೂರಿ ಬೆಳೆದ ಈ ಪ್ರವೃತ್ತಿ ಸಾಯೊಲ್ಲದೆ ಸವಾಲು ಒಡ್ಡುತ್ತಲೇ ಬಂದಿದೆ, ಹಾಗೂ ಸಮಾಜದ ಸ್ವಾಸ್ಥ್ಯಕ್ಕೆ, ರಾಷ್ಟ್ರದ ಏಕತೆಗೆ ಮಾರಕವಾಗುವ ರೀತಿ ವರ್ತಿಸುತ್ತಿದೆ.

ಅಂತ್ಯಜರೆಂದು ಮೇಲಿನವರ ತುಚ್ಛೀಕಾರಕ್ಕೆ ಒಳಗಾದ ವರ್ಗದವರಲ್ಲೂ ಅನೇಕ ಮಂದಿ ಜ್ಞಾನಿಗಳೂ ಸಂತರೂ ವಿಕಾಸ ಹೊಂದಿದ್ದಾರೆ. ಸಮಾಜದ ಕ್ರೌರ್ಯದ ನಡುವೆಯೂ ತಮ್ಮ ವಿವೇಕವನ್ನು ಬಿಡದೆ ಬದುಕಿ ಅಮರರಾಗಿದ್ದಾರೆ. ತಮಿಳುನಾಡಿನಲ್ಲಿ ಬದುಕಿದ್ದು, ಶ್ರೀವೈಷ್ಣವ ಭಕ್ತಿ ಮಾರ್ಗವನ್ನು ಅನುಸರಿಸಿದ ಆಳ್ವಾರರುಗಳ ಪೈಕಿ ತಿರುಪಾಣಿ ಎಂಬವನು ಇಂಥವನು. ಇವನು ಮಹಾ ಭಗವದ್ಭಕ್ತ. ಶ್ರೀರಂಗದ ದೇವಾಲಯದ ಮುಂದೆ ಕುಳಿತು ದೇವರನ್ನು ಸ್ತುತಿಸಿ ಹಾಡುವ ದಿವ್ಯಾವೇಶ ಇವನದು. ಇವನ ಬಳಿ ಹೋದರೆ ತನ್ನ ಮಡಿಗೆ ಚ್ಯುತಿ ಬಂದೀತೆಂದು ದೇವಾಲಯದ ಅರ್ಚಕನ ಸಿಡಿಮಿಡಿ. ಒಮ್ಮೆ ಅವನು ಕೋಪದಿಂದ ತಿರುಪಾಣಿಯತ್ತ ಕಲ್ಲು ಬೀರಿದ. ಆದು ತಿರುಪಾಣಿಯ ಹಣೆಗೆ ತಾಕಿ ರಕ್ತ ಸುರಿಸಿತು. ಹಾಡಿನಲ್ಲಿ ಮೈಮರೆತು ಪೂಜೆಗೆ ಅಡ್ಡಿ ಉಂಟುಮಾಡಿದ್ದು ಮಹಾಪರಾಧವಾಯಿತೆಂದು ತಿರುಪಾಣಿ ನೊಂದುಕೊಂಡು ದಾರಿ ಬಿಟ್ಟ. ಆದರೆ ತನ್ನ ಭಕ್ತನಿಗೆ ನೋವಾಯಿತೆಂದು ದೇವರಿಗೆ ಕೋಪ ಬಂದಿತ್ತು. ದೇವಾಲಯದ ಬಾಗಿಲು ತಟ್ಟನೆ ಹಾಕಿಕೊಂಡಿತು. ಅದನ್ನು ತೆರೆಯಲು ಅರ್ಚಕ ಪಟ್ಟ ಯಾವ ಪ್ರಯತ್ನವೂ ಫಲಿಸಲಿಲ್ಲ.

ಕೊನೆಗೆ ಅರ್ಚಕನಿಗೆ ತನ್ನ ತಪ್ಪು ಗೊತ್ತಾಯಿತು. ತನ್ನ ಅಹಂಕಾರಕ್ಕೆ ಪಶ್ಚಾತ್ತಾಪಪಟ್ಟು, ತಿರುಪಾಣಿಯ ಕ್ಷಮೆ ಕೋರಿ, ಅವನನ್ನು ಹೆಗಲ ಮೇಲೆ ಕೂರಿಸಿಕೊಂಡು ದೇವಾಲಯದ ಏಳು ಪ್ರಾಕಾರಗಳನ್ನೂ ಸುತ್ತಿ ಗುಡಿಯೊಳಕ್ಕೆ ಕರೆದುಕೊಂಡು ಹೋಗಿ ಅವನಿಗೆ ದೇವರ ದರ್ಶನ ಮಾಡಿಸಿದನಂತೆ. ಜ್ಞಾನದ ಹೆಗಲಿನ ಮೇಲೆ ಭಕ್ತಿ - ವಿನಯಗಳು ಕೂತಾಗಲೇ ಅರ್ಚಕನ ಜೀವನ ಸಾರ್ಥಕವೆನಿಸಿದ್ದು. ಅಂತ್ಯಜನೆನಿಸಿಕೊಂಡ ತಿರುಪಾಣಿ ಅಂದಿನಿಂದ ತಿರುಪಾಣಿ ಆಳ್ವಾರ್ ಆದ.

ರಾಮಾನುಜಾಚಾರ್ಯರು ಒಮ್ಮೆ ಯಾತ್ರೆ ಕೈಗೊಂಡಿದ್ದಾಗ ತಿರುಮಂಗೈ ಆಳ್ವಾರರ ಊರಾದ ತಿರುನಗರಿಗೆ ಹೋಗಿದ್ದರಂತೆ. ಹಾದಿಯಲ್ಲಿ ಹರಿಜನ ಹೆಂಗಸೊಬ್ಬಳು ಎದುರಾದಳು. ಅವಳು ಹತ್ತಿರ ಬಂದರೆ ಮೈಲಿಗೆಯಾಗುವುದೆಂಬ ಕಾರಣದಿಂದ, ದೂರ ಸರಿಯಬೇಕೆಂದು ಆಕೆಗೆ ಆಜ್ಞೆಯಾಯಿತು. ಎಲ್ಲಿ ಹೋಗಬೇಕೆಂಬುದು ಗೊತ್ತಾಗದೆ ಅವಳಿಗೆ ದಿಗ್ಭ್ರಮೆಯಾಯಿತು. ನಾನು ಎಲ್ಲಿ ಹೋಗಲಿ? ನನ್ನ ಮುಂದೆ ಪವಿತ್ರಾತ್ಮರಾದ ತಾವೇ ಇದ್ದೀರಿ. ಹಿಂದೆ ಪವಿತ್ರವಾದ ದೇವಸ್ಥಾನ. ಬಲಗಡೆಯಲ್ಲಿ ತಿರುಮಂಗೈ ದರೋಡೆಕೋರನಾಗಿದ್ದಾಗ ಯಾತ್ರಿಕವೇಷದಲ್ಲಿ ಬಂದ ದೇವರನ್ನು ತಡೆದು ನಿಲ್ಲಿಸಿದ ಪವಿತ್ರವಾದ ಹೊಲ. ಎಡಗಡೆಯಲ್ಲೂ ಪವಿತ್ರವಾದ ದೇಗುಲ. ಸುತ್ತಲೂ ಪವಿತ್ರವಾದ್ದೇ ಇರುವಾಗ ನನಗೆ ಎಡೆಯಾದರೂ ಎಲ್ಲಿ? ಅಪವಿತ್ರತೆಗೆ ಜಾಗವೆಲ್ಲಿ?'

ಆ ಮುದುಕಿಯು ಮುಗ್ಧ ಮಾತು ರಾಮಾನುಜರ ಮನಸ್ಸನ್ನು ನಾಟಿತು. ನಿಜ, ಪಾವಿತ್ರ್ಯವೇ ಸುತ್ತುವರಿದಿರುವಾಗ ಅಪವಿತ್ರತೆಗೆ ಎಡೆಯಿಲ್ಲ. ರಾಮಾನುಜರು ಆಕೆಯ ಕ್ಷಮೆ ಕೋರಿದರು.

ಶಂಕರಾಚಾರ್ಯರ ಬಾಳಿನಲ್ಲೂ ಇಂಥದೊಂದು ಘಟನೆ ನಡೆಯಿತಂತೆ. ಜಾತಿಹೀನನೊಬ್ಬ ಕಸಾಯಿಖಾನೆಯಿಂದ ಮಾಂಸ ತರುತ್ತಿದ್ದಾಗ ಹಾದಿಯಲ್ಲಿ ಬರುತ್ತಿದ್ದ ಆಚಾರ್ಯರನ್ನು ಸೋಕಿಸಿಕೊಂಡ. ನೀನು ನನ್ನನ್ನು ಮುಟ್ಟಿಸಿಕೊಂಡೆಯಲ್ಲ ಎಂದು ಶಂಕರರು ಹೇಳಿದರು. ಅದಕ್ಕೆ ಅವನು ಹೀಗೆ ಹೇಳಿದ: 'ಸ್ವಾಮಿ, ನಾನು ನಿಮ್ಮನ್ನು ಮುಟ್ಟಲಿಲ್ಲ, ನೀವು ನನ್ನನ್ನು ಮುಟ್ಟಲಿಲ್ಲ. ನಿಜವಾಗಿ ನೀವು ಎಂದರೆ ಯಾರು? ದೇಹವೇ, ಮನಸ್ಸೇ, ಬುದ್ಧಿಯೆ? ಅದನ್ನು ಮೊದಲು ಹೇಳಿ. ಸತ್ತ್ವ - ರಜೋ - ತಮೋಗುಣಗಳಲ್ಲಿ ಯಾವುದೂ ನಿಜವಾದ ಆತ್ಮವನ್ನು ಸೋಕಲೇಬಾರದು'. ಹೀಗೆಂದ ಆತನ ಮಾತನ್ನು ಕೇಳಿದಾಗ ಶಂಕರಾಚಾರ್ಯರಿಗೆ ತಮ್ಮ ಮಾತಿನ ತಪ್ಪು ಗೊತ್ತಾಯಿತಂತೆ.

ರಾಮಾನುಜರು ಬಾಳಿನ ಕೊನೆಯ ದಿನಗಳನ್ನು ಶ್ರೀರಂಗದಲ್ಲಿ ಕಳೆಯುತ್ತಿದ್ದಾಗ, ನಿತ್ಯವೂ ಕಾವೇರಿಯಲ್ಲಿ ಮಿಂದು ಮರಳುವಾಗ ಹಾದಿಯಲ್ಲಿ ಪಟ್ಟಣಿ ಪೆರುಮಾಳ್ ಎಂಬ 'ಅಸ್ಪೃಶ್ಯ'ನ ಸುಶ್ರಾವ್ಯ ಸಂಗೀತಕ್ಕೆ ಮಾರುಹೋಗುತ್ತಿದ್ದರಂತೆ, ಅವನ ಗುಡಿಸಲನ್ನೂ ಹೊಗುತ್ತಿದ್ದರಂತೆ, ಸ್ನಾನ ಮಾಡಿ ಮರಳುವಾಗ ಅವನ ಹೆಗಲ ಮೇಲೆ ಕೈ ಹಾಕಿಕೊಂಡು ಬರುತ್ತಿದ್ದರಂತೆ. ಮೇಲುಕೀಳೆಂಬ ಭೇದಭಾವ ಅವರಿಗೆ ಇರಲಿಲ್ಲ.

ಆದರೆ ಅವರ ಅನುಯಾಯಿಗಳು ಸಂಪ್ರದಾಯದ ತೆರೆಯನ್ನು ಕಳಚಿಕೊಳ್ಳಲಿಲ್ಲ. ಆಚಾರ್ಯರು ಅವತಾರಪುರುಷರು. ಅವರು ಏನು ಮಾಡಿದರೂ ತಪ್ಪಿಲ್ಲ. ಆದರೆ ತಾವು ಹಾಗೆ ಮಾಡುವುದು ಅನಾಚಾರವೆಂದು ಆ ಜನರು ಬಗೆದರು. ಇದು ದುರ್ದೈವದ ಸಂಗತಿ.

ಗುಹಾ

ರಾಗ: ಕಾನಡ. (ಸ್ವರಚಿತ)

ಶಂಕರ ಆದಿ ಶಂಕರಾ।

ಶಂಕರ ಆದಿ ಶಂಕರಾ ।

ಭವವನುದ್ಧರಿಸಲು ನೀ ಎತ್ತಿದೆ ಅವತಾರ॥ಶಂಕರ ॥

ಎಳವೆಯಲ್ಲೇ ನೀ ಅರಿತೆ।ಈ ಭವವು ನಿಸ್ಸಾರ।।

ತಾಯಿಯ ಮಣಿಸಿ । ಸನ್ಯಾಸ ಗಳಿಸಿ।

ಮಾಡಿದೆ ಭವ ಸುಖದ ತಾತ್ಸಾರ।

ಬಾಲ್ಯದಿಂದಲೇ ವೇದೋಪನಿಷತ್

ಮೀಮಾಂಸೆಗಳ ಪಂಡಿತನೆನಿಸಿದೆ।

ತರ್ಕ ವ ಮಾಡಿ ತಾರಕಕ್ಕೇರಿದೆ ॥ಶಂಕರ ॥

ಶಂಕರ, ಶ್ರೀ ಹರಿಯ ಒಲುಮೆಯ ಗಳಿಸಿದೇ

ಮಾತೃ ಋಣವು ಮಿಗಿಲೆಂದು ಜಗಕೆ ತೋರಿದೆ।

ಪರಕಾಯ ಪ್ರವೇಶಿಸಿ ಭವದನುಭವ ಗಳಿಸಿ।

ಅಂಟಿಯೂ ಅಂಟದೆ ಭವವನೇ ತ್ಯಜಿಸಿದೆ॥

ಶಾರದಾ ಮಾತೆಯ ವರಪುತ್ರ ನೆಂದೆನಿಸಿದೆ।

ಶ್ರೀ ಚಕ್ರಸ್ಥಾಪಿಸಿ ದೇವಿಯ ನೆಲೆ ಗೊಳಿಸಿದೆ।

ಭಕ್ತಿ ಮಾರ್ಗವ ನೀ ಅನುಸರಿಸಿದೆ ।

ಅದ್ವೈತ ನಾಯಕ ನೀನಾಗಿ ಮೆರೆದೆ ॥ಶಂಕರ ॥

ಸಾವಿತ್ರಿ ನಾಗರಾಜ್

ಅಡ್ಡಂ ದಿಡ್ಡಂ ಪಾಯಾ ಪರಂಗಿ

ಈಗಿನ ಮಕ್ಕಳಿಗೆ ಬಹಳಷ್ಟು ಆಟಿಕೆಗಳು ,ಚಂದದ ಚಿತ್ರದ ಪುಸ್ತಕಗಳು ಇರುತ್ತವೆ. ಮಲೆನಾಡಿನಲ್ಲಿ ಕಳೆದ ನಮ್ಮ ಬಾಲ್ಯದ ಆಟಗಳು ನೆನಪಾಗುತ್ತವೆ.ಯಾವ ಉಪಕರಣಗಳಿಲ್ಲದ ಆಟಗಳು ಅವು! ಅಡ್ಡಂ ದಿಡ್ಡಂ ಪಾಯಾ ಪರಂಗಿ ಅಥವಾ ಅವಲಕ್ಕಿ ಪವಲಕ್ಕಿ ಕಾಂಚನ ಮಿಣಮಿಣ ಅನ್ನುತ್ತಾ ಅಂಗೈ ಕವಚಿ ಅಥವಾ ಮೇಲ್ಮುಖವಾಗಿ ಇಡುತ್ತಾ ಆಡುವ ಆಟಗಳು.ಸಾಲುಗಳ ಅರ್ಥಗೊತ್ತಿಲ್ಲದಿದ್ದರೂ ಇಂದಿಗೂ ನೆನಪಲ್ಲಿ ಉಳಿದಿರುವಷ್ಟು ಸೊಗಸಾಗಿವೆ. ಕಣ್ಣಾಮುಚ್ಚೇ ಕಾಡೇಗೂಡೆ ನಮ್ಮಯಹಕ್ಕಿ ಬಿಟ್ಟೇ ಬಿಟ್ಟೆ..ಈ ಸಾಲುಗಳು ಎಷ್ಟು ಜನಪ್ರಿಯ!

ಕೆಲವು ಶಬ್ದಗಳನ್ನು ಪ್ರಾಸಬದ್ಧವಾಗಿ ಹೇಳಿ ಆಡುತ್ತಿದ್ದೆವು.ಉದಾ: ಅತ್ತೆ,ಗಿತ್ತೆ,ಮನೆಮನೆ ಮತ್ತೆ,ಕಸ್ತುರಿ ಕತ್ತೆ ಎಂದು ಹೇಳಿ ನಗುವುದು.ಮಾತಾಡುವಾಗ ಪ್ರತಿಯೊಂದು ಅಕ್ಷರಕ್ಕೂ ಕ ಅಥವಾ ಪ ಸೇರಿಸಿ ಚುರುಕಾಗಿ ಮಾತಾಡುವುದು ಬಹಳ ಮೋಜು ನೀಡುತ್ತಿತ್ತು. ನೀನು ಬಾ ಅನ್ನಲು ಕನೀ ಕನು ಕಬಾ ಅನ್ನುವುದು.ಇಲ್ಲವೇ ನಿಗರ್ ನೀನು ಬಗರ್ ಬಾ ಎನ್ನುವುದು ಹೀಗೆ ಏನೇನೋ ಆಟಗಳು.ಮನೆಯೊಳಗೇ ಆಡುವ ಇಂತಹ ಆಟಗಳನ್ನು ಅದಾರು ಸೃಷ್ಟಿಸಿದರೋ..ಯಾವ ಉಪಕರಣಗಳಿಲ್ಲದ ಮಾತೇ ಬಂಡವಾಳವಾದ ಆಟಗಳೆಷ್ಟೋ!

ಅಡಿಕೆ ಚಪ್ಪರದ ಕಂಬಗಳಲ್ಲಿ ಕಂಬದಾಟ,ದರಗು ತರುವ ಝುಲ್ಲೆ ಅಥವಾ ಸುತ್ತಿದ ಚಾಪೆಯಲ್ಲೇ ಮನೆ ಆಟ.

ಅಡಿಕೆ ಹಾಳೆಯಲ್ಲಿ ಚಿಕ್ಕವರನ್ನು ಕೂರಿಸಿ ಎಳೆಯುವುದು.ಬಿದಿರಿನಲ್ಲಿ ಮಾಡಿದ ಕೊಳಲು ಅಥವಾ ಕೈಯಲ್ಲಿ ತಳ್ಳುವ ಕೋಲು ಗಾಡಿ ಹೀಗೆ ಏನೇನೋ..ಅಲ್ಲೇ ದೊರೆಯುವ ವಸ್ತುಗಳನ್ನು ಬಳಸಿ ನಮ್ಮ ಆಟಿಕೆ ಸಿದ್ಧವಾಗುತ್ತಿತ್ತು

ಶಾಲೆಗೆ ಹೋಗುವಾಗ ಕಬಡ್ಡಿ,ಲಗೋರಿ,ಮುಂತಾದವೆಲ್ಲ ಪ್ರಿಯವಾದ ಆಟಗಳು.

ಮಲೆನಾಡಿನಲ್ಲಿ ಬಿಡುವಿನಲ್ಲಿ ಹಿರಿಯರು ಇಸ್ಪೀಟ್ ಆಡುತ್ತಿದ್ದುದರಿಂದ ಅದರಲ್ಲೂ ಹಲವು ರೀತಿಯ ಆಟ ಆಡುತ್ತಿದ್ದೆವು.

ಹಿರಿಯರು ಕೇಳುತ್ತಿದ್ದ ಮೋಜಿನಿ ಲೆಕ್ಕಗಳು ಸವಾಲಾಗಿರುತ್ತಿದ್ದವು.

ಮಲೆನಾಡಿನಲ್ಲಿ ಪಗಡೆ ಮತ್ತು ಚನ್ನೆಮಣೆ ಸಮಾನ್ಯವಾಗಿ ಕಂಡು ಬರುವ ಆಟಗಳು.ಪಗಡೆ ಆಟದಲ್ಲಿ ಕಾಯಿ ಹಣ್ಣಾಗಿ ಒಂದು ಬೀಳದೆ ಚಿಂತೆಯಾದರೆ,ಚೆನ್ನೆಯಾಟದಲ್ಲಿ ಕರು ಹಾಕಿದರೆ ಖುಷಿ.

ಮಲೆನಾಡಿನ ಇಂತಹ ಹಲವಾರು ಜನಪ್ರಿಯ ಆಟಗಳು ಈಗಿನ ಮಕ್ಕಳಿಗೆ ಅಪರಿಚಿತವಾಗುತ್ತಿವೆ ಅನಿಸುತ್ತಿದೆ.

-ಹುವಾಶ್ರೀ

ಮೆಲ್ಲಾನೆ ನಡೆಯಬೇಕಮ್ಮ

ಮೆಲ್ಲಾನೆ ನಡೆಯ ಬೇಕಮ್ಮ

ನಮ್ಮೂರ ಹಾದಿಯಲಿ

ಮೆಲ್ಲಾ---ನೆ ನಡೆಯಬೇಕಮ್ಮ.

ಅವಸರಿಸಿದರೆ ಕಾಲು ಜಾರುವುದು
ಕಾಲು ಜಾರಿದರೆ ಸೊಂಟ ಮುರಿಯುವುದು
ಮೈಕೈ ಕೆಸರಾದರು ಬಾಯ್ ಮೊಸರಾಗದು
ಮೆಲ್ಲಾ-----ನೆ ನಡೆಯಬೇಕಮ್ಮ.

ಹೆಜ್ಜೆಯ ಮೇಲ್ ಒಂದ್ ಹೆಜ್ಜೆಯ
ನಿಕ್ಕುತ,ಕೊಚ್ಚೆ ಕಾಲ್ಗಳ ಛಾಪನು
ಒತ್ತುತ ,ಅಕ್ಕಪಕ್ಕ ದೃಷ್ಟಿ ಹಾಯಿಸದೆ
ನೆಟ್ಟದೃಷ್ಟಿಯಲಿ ಮುಂದೆ ನೋಡುತ
ಮೆಲ್ಲಾ--ನೆ ನಡೆಯಬೇಕಮ್ಮ.

ಇಂದು ಕಾವೇರಿಯ ನೀರಿಗೆನ್ನುತ
ನಾಳೆ ಒಳ ಚರಂಡಿಯ ಗೂಡಿಗೆನ್ನುತ
ಮುಂದೆ ದೂರವಾಣಿ, ದೂರದರ್ಶನದ
ಕೇಬಲ್ ಎಳೆಯುತ, ಹಲವಾರು
ಕಾರಣ ಹೇಳಿ ರಸ್ತೆ ಬಗೆಯುತ
ಮುಚ್ಚಲಾಗದ ಗುಂಡಿಗಳ ತೋಡಿಹರು.
ಮೆಲ್ಲಾ---ನೆ ನಡಿಯಬೇಕಮ್ಮ.

ಬುದ್ದು ಸಿದ್ದು ಕೈಚೆಲ್ಲಿ ನಡೆದರು
ಹೊಸ ಗುಂಪಿನ ಧೀರರು ಬಂದು
ನಿಂತಿಹರು, ವರುಷದ ಹೊಲಸ
ಹಾಂಗೆ ತೊಳೆವರೊ ಕಾದು
ನೋಡುತ ಜನ ಸಾಮಾನ್ಯರು,
ಮೆಲ್ಲಾ---ನೆ ನಡೆಯಬೇಕಮ್ಮ.
ನಮ್ಮೂರ ಹಾದಿಯಲಿ,

ಮೆಲ್ಲನೆ ನಡೆಯಬೇಕಮ್ಮ.

ಮಾಲತಿಶ್ರೀನಿವಾಸನ್.

ರಾಗ: ಬೇಹಾಗ್(ಸ್ವರಚಿತ) ಆದಿತಾಳ.

ಬಾರೇ ಬ್ರಹ್ಮನ ರಾಣಿ|ಶಾರದ ದೇವಿ|

ಬಾರೇ ಬ್ರಹ್ಮನ ರಾಣಿ||ಪ||

ಬಾರೇ ಬ್ರಹ್ಮನ ರಾಣಿ ಭಾರತಿ ದೇವಿ|

ನಿನ್ನಾರಾಧಿಪೆ ದಯೆತೋರು

ಬಾರೇ||ಅ|ಪ||

ತುಂಗೆಯ ತಟದಲಿ ನೆಲೆಸಿರುವೇ|

ಶೃಂಗೇರಿಯಲ್ಲಿ ಮೆರೆದಿರುವೆ||

ಭಗವತ್ಪಾದರ ಆರಾಧ್ಯ ದೈವವೆ|

ವೀಣಾ ಪಾಣಿಯೆ ದಯತೋರು ಬಾರೇ||೧||

ತುಂಗಾ ನದಿಜಲ ಪಾವನವಾಯಿತು|

ನಿನ್ನ ಪದತಲ ಸೋಂಕಿನಲಿ||

ಶೃಂಗಗಿರಿ ಭೂಮಿ ಪುಣ್ಯವೆಂದೆನಿಸಿತು|

ನಿನ್ನ ತವಪದ ಸಾನಿಧ್ಯದಲಿ||೨||

ಜ್ಞಾನಾಭಿಮಾನಿ ವಿದ್ಯಾಭಿಮಾನಿ|

ಸರಿಗಮ ಸಪ್ತಸ್ವರ ಸಾಮ್ರಾಜ್ಞಿ ನೀ||

ಶ್ರೀ ಚಕ್ರ ಮಧ್ಯನಿವಾಸಿನಿ ದೇವಿ|

ಶ್ರೀ ಶಂಕರರ ಹೃದಯ ವಿಶ್ವಾಸಿನಿ||೩||

ಮಂಗಳಾ ನಾಡಿಗ್.

ಕಿರಿಕಿರಿಯ ಕರೆಗಳು

ಅಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ನಮ್ಮ ಯುವ ಮಂತ್ರಿಗಳು ಮನೆಗೆ ಕೆಲವು ಸಾಮಾನುಗಳನ್ನು ತರಲು ವರ್ತನೆಯ ಅಂಗಡಿಗೆ ಹೋಗಿದ್ದರು .ನಮ್ಮ ಸ್ಥಿರವಾಣಿ ಚೀರಿತು .ಗೃಹಮಂತ್ರಿಗಳು ಕರೆ ಸ್ವೀಕರಿಸಲು **ಅಮ್ಮಾ** ಎಂದು ಅಸ್ಪಷ್ಟವಾಗಿ ಕೇಳಿಸಿತು .ಮಳೆಯ ಕಾರಣ ಸ್ಥಿರವಾಣಿಗೆ ಲಕ್ವ ಬಡಿದು ಕೊರಕೊರ,bಗೊರಗೊರ ಚಿಟಚಿಟ ಒಗ್ಗರಣೆಯ ಶಬ್ದಮಾಡಿತು .ಕರೆ ಕಟ್ ಆಯಿತು .ಮರುಕ್ಷಣದಲ್ಲೇ ಗೃಹಮಂತ್ರಿಗಳ ಚರವಾಣಿ ರಿಂಗಣಿಸಿತು. ಕರೆ

ಸ್ವೀಕರಿಸಲು ಪ್ರಯತ್ನಿಸಲು ಚರವಾಣಿಗೂ ಲಕ್ವ ಬಡಿದು ಸ್ಕ್ರೀನ್ ಲಾಕ್ ಆಗಿತ್ತು .ಆದರೂ ಅದು ಚೀರುತ್ತಲೇ ಇದ್ದು ಕರೆ ಕಟ್ ಆಯಿತು. ಮತ್ತೆ ಮರು ನಿಮಿಷದಲ್ಲೇ ನನ್ನ ಮೊಬೈಲ್ ಟ್ರಿನ್ ಗುಟ್ಟಿತು .ನಾನು ಕರೆ ಸ್ವೀಕರಿಸಲು ಅದರ ಸ್ವರತಂತು ಉಡುಗಿತ್ತು .ಸ್ಪೀಕರ್ ಆನ್ ಮಾಡಿದರೂ ನೆಟ್ ವರ್ಕ್ ಸಮಸ್ಯೆಯಿಂದ ಅಸ್ಪಷ್ಟವಾಗಿತ್ತು . ಆದ್ದರಿಂದ ಮನೆಯ ಹಿಂಬಾಗಿಲು ತೆಗೆದು ಆಚೆ ಹೋದೆ .ಆಗ ಅಣ್ಣಾ!ಎಂಬ ದನಿ ಕೇಳಿಸಿ ,ಅದು ನಮ್ಮ ಯುವಮಂತ್ರಿಗಳದೇ ಎಂದು ಗೊತ್ತಾಯಿತು .ಹಲೋ ಎನ್ನುವಷ್ಟರಲ್ಲಿ ಕರೆಯ ಸಂಪರ್ಕ ಕಡಿಯಿತು .ಆದರೆ ಕರೆ ಅಪರಿಚಿತ ಸಂಖ್ಯೆ ಎಂದು ತಿಳಿದು ಗೊಂದಲವಾಯಿತು.ನಾನು ನಮ್ಮ ಯುವ ಸಚಿವರಿಗೆ ಕರೆ ಮಾಡಲು ಪ್ರಯತ್ನಿಸಿದೆ .ದೂರವಾಣಿ ಇಲಾಖೆಯ ರಮಣಿಯ ಕೊರೋನಾ ವಿಚಾರದ ದೀರ್ಘ ಮುದ್ರಿತ ಉಪದೇಶವಾಣಿ,ನಂತರ ಏರ್ಟೆಲ್ ನರಮಣಿಯ ಮನೆಯಿಂದಲೇ ರೀಚಾರ್ಜ್ ಮಾಡುವ ಸೌಕರ್ಯ ದ ಉಪದೇಶವಾಣಿಗಳ ನಂತರ ನಮ್ಮ ಯುವಸಚಿವರ ಚರವಾಣಿಯ ಟ್ರಿಣ್ ಟ್ರಿಣ್ ವಾಣಿ ಕೇಳಿಸಿತು .ಆದರೆ *ನೀವು ಕರೆ ಮಾಡಿದ ಚಂದಾದಾರರು ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ *ಎಂಬ ಮುದ್ರಿತ ಸಂದೇಶ ಪಲುಕಿದ ವಾಣಿ ಬಂತು .ಇವರೇನು ಹೇಳುವುದು? ಅವರು ಹೊರಗೆ ಹೋಗಿರುವುದು ನಮಗೇ ತಿಳಿದೇ ಎಂದುಕೊಂಡೆ .ಆದರೆ ಅವರ ಚರವಾಣಿಯ

ಟ್ರಿಣ್ ನಿಲ್ಲಲೇ ಇಲ್ಲ.ಧ್ವನಿ ಆಲಿಸಿದಾಗ ಅದು ನಮ್ಮಮಹಡಿಯ ಮೇಲೆ ರೂಮಿನಿಂದ ಎಂದು ಗೊತ್ತಾಯಿತು .ಯುವ ಸಚಿವರು ಅವರ ಚರವಾಣಿಯನ್ನು ಕೊಂಡೊಯ್ಯಲು ಮರೆತಿದ್ದರು .ಅಪರಿಚಿತ ಸಂಖ್ಯೆ ಯ ಕಾರಣವೂ ತಿಳಿಯಿತು .ಸಂಪರ್ಕ ಕಟ್ ಮಾಡಿ ಸುಮ್ಮನಾದೆವು .

ಅಷ್ಟು ಸುಲಭವೇ ಸುಮ್ಮನೆ ಇರಲು?

ಮರುಕ್ಷಣವೇ ನಮ್ಮ ಸ್ಥಿರವಾಣಿ ರಿಂಗಣಿಸಿತು .ಮತ್ತೆ ಅದೇ ಒಗ್ಗರಣೆಯ ಶಬ್ದ ,ಅಸ್ಪಷ್ಟ ದನಿ .ಸಂಪರ್ಕ ಕಡಿತ .ಮರುಕ್ಷಣದಲ್ಲಿ ಗೃಹಮಂತ್ರಿಗಳ ಚರವಾಣಿ ಚೀರಿತು ,,ಅದೇ ಲಕ್ವದ ಕಥೆ ನಾನು ಕರೆ ಸ್ವೀಕರಿಸಲು ಪ್ರಯತ್ನಿಸಲು ,ದನಿಯ ಗುಂಡಿ ,ಚಾಲನೆ ಮಾಡುವ ಗುಂಡಿ ಎರಡನ್ನೂ ಒಟ್ಟಿಗೇ ಒತ್ತಿ ಹಿಡಿಯಲು ಸೂಚನೆ ಕಾಣಿಸಿತು .ಈ ಒತ್ತುವರಿಯ ಪ್ರಯತ್ನ ವಿಫಲವಾಗಿ ಕರೆ ಕಟ್ ಆಯಿತು .ಆದರೆ ನನ್ನ ಚರವಾಣಿ ರಿಂಗಣಿಸಿತು .ಈ ಕರೆ ನಮ್ಮ ಅನಿವಾಸಿ ಸಚಿವೆ ಯದೆಂದು ತಿಳಿಯಿತು .ಆದರೆಸ್ವೀಕರಿಸುವಷ್ಟರಲ್ಲಿ ಸಂಪರ್ಕ ಕಡಿಯಿತು .ನಾನು ಅವರಿಗೆ ಕರೆ ಮಾಡಲು ಪ್ರಯತ್ನಿಸಿದಾಗ ಮತ್ತೆ ಅದೇ ದೂರವಾಣಿ ಇಲಾಖೆ ಮತ್ತು ಏರ್ ಟೆಲ್ ನವರ ಮುದ್ರಿತ ಸಂದೇಶಗಳ ಕೊರೆತ ಮುಗಿದ ಅವರ ಚರವಾಣಿ ರಿಂಗಣಿಸಿದನ್ನು ಆಲಿಸಲು ,ನೀವು ಕರೆ ಮಾಡಿದ ಗ್ರಾಹಕರು ಸಂಭಾಷಣೆಯಲ್ಲಿ ನಿರತರಾಗಿದ್ದಾರೆ .ಸ್ವಲ್ಪ ಸಮಯದ ನಂತರ ಪ್ರಯತ್ನಿಸಿ ಎಂಬ ಮುದ್ರಿತ ಸಂದೇಶದ ಉಲಿತ .ನಮಗೆ ಈ ಕಿರಿಕಿರಿ ಕರೆಗಳಿಂದ

ಹುಚ್ಚು ಹಿಡಿಯುವಷ್ಟರಲ್ಲಿ ಮತ್ತೆ ನನ್ನ ಚರವಾಣಿ ರಿಂಗಣಿಸಿತು .

ಈ ಸಲ ನಮ್ಮ ಇನ್ನೊಬ್ಬ ಅನಿವಾಸಿ ಸಚಿವೆಯ ಕರೆ .ಕರೆ ಸ್ವೀಕರಿಸಿ ಹಲೋ ಎಂದೆ .ಸುದೈವ ಏನೂ ಅಡ್ಡಿ ಆಗಲಿಲ್ಲ. ಅವರು ಅಣ್ಣಾ! ಇವನು ಅಂಗಡಿ ಇಂದ ಫೋನು ಮಾಡಿದ್ದ .

ಮನೆಗೆ ಫೋನು ಮಾಡಿದರೆ ಯಾರೂ ಎತ್ತುತ್ತಾ ಇಲ್ಲ.ನಾನು ಸಾಮಾನು ತರಲು ಅಂಗಡಿಗೆ ಬಂದಿದೀನಿ .ಮೊಬೈಲು ಮನೇಲೆ ಮರೆತೆ .ಸಾಮಾನು ಲಿಸ್ಟ್ ಎಲ್ಲೋ ಬಿದ್ದುಹೋಯಿತು .ಎರಡು ಸಾಮಾನು ಜ್ಞಾಪಕ ಆಗ್ತಾ ಇಲ್ಲ. ಅಮ್ಮ ನಿಗೆ ಹೇಳು ಅಂದ .ಸರಿ ಎಂದು ಹೇಳಿ ನಾನು ಆಗಲೇ ಬಂದ ಅಪರಿಚಿತ ಸಂಖ್ಯೆಗೆ ಕರೆ ಮಾಡಿದೆ . ಯಥಾಪ್ರಕಾರ ,ದೂರವಾಣಿ ಇಲಾಖೆ ,ಏರ್ ಟೆ ಲ್ ನವರ ಉಪದೇಶವಾಣಿಗಳ ಅನುರಣನ ವಾದನಂತರ ಅತ್ತಕಡೆ ಇಂದ ನಾವು ಸಾಮಾನು ತೆಗೆದುಕೊಳ್ಳುವ ಅಂಗಡಿಯವರು ಹಲೋ ಎಂದರು .ನಮ್ಮ ಯುವಸಚಿವರ ಹೆಸರು ಹೇಳಿ,ಅವರು ಅಲ್ಲಿ ಇದ್ದರೆ ಮಾತಾಡುವಂತೆ ತಿಳಿಸಿದೆ .ಅವರು ಆಗಲೇ ವಾಪಸು ಹೋದರು ಎಂದು ಹೇಳಿದರು .

ಅದೇ ಕ್ಷಣವೇ ನಮ್ಮ ಗೇಟು ತೆರೆದ ಸದ್ದಾಯಿತು .ಬಾಗಿಲು ತೆರೆದ ತಕ್ಷಣ ಏದುಸಿರು ಬಿಡುತ್ತಾ ಗಾಬರಿ ,ಗಡಿಬಿಡಿ ಇಂದ ನನ್ನ ಮೊಬೈಲು ಮನೇಲೇ ಇದೆಯಾ ?ಒಳಗೆ ನುಗ್ಗಿದರು.ಸಾಮಾನು ಲಿಸ್ಟ್ ಎಲ್ಲೋ ಬಿದ್ದು ಹೋಯಿತು

.ಎರಡು ಜ್ಞಾಪಕ ಬರಲಿಲ್ಲ .ಏನಾದರೂ ಆಗಲಿ ಅಂತ ರವೆಇಡ್ಲಿ, ಕಾಫೀ ಪುಡಿ ತಂದೆ ಎಂದರು .ಅವರು ತೊಗರೀಬೇಳೆ ,ಹುಣಿಸೆ ಹಣ್ಣು ಮರೆತಿದ್ದರು.

ಬಾಲಂಗೋಚಿ

ಇಷ್ಟೆಲ್ಲಾ ಪ್ರಸಂಗದ ಸಮಯ ಹದಿನೈದು ನಿಮಿಷಗಳು .ಆಮೇಲೆ ನಡೆದ ಬಿಸಿಬಿಸಿ ಚರ್ಚೆ,ಮಾತುಕತೆವನಿಮ್ಮ ಊಹೆಗೇ ಬಿಟ್ಟದ್ದು.

ಡಿ ಬಿ ಪ್ರಾಣೇಶ ರಾವ್

ಕಾರ್ಯ ಕಾರಣ ಸಂಬಂಧ

ಬದುಕು ವಿಚಿತ್ರವೆನಿಸಿದರೂ ವಿಚಿತ್ರ ವಲ್ಲದ ಘಟನೆಗಳ ಸಂಗಮ. ಇತ್ತೀಚೆಗೆ ನನಗೆ ಗಾಢವಾಗಿ ಅನ್ನಿಸುತ್ತಿರುವುದು ಹಾಗೂ ಅನುಭವಕ್ಕೆ ಬರ್ತಿರೋದು ಏನಂದ್ರೆ ಪ್ರತಿಕ್ಷಣದ ಪ್ರತಿ ಘಟನೆಗೂ ಕಾರ್ಯ-ಕಾರಣ ಸಂಬಂಧವಿರಬಹುದು ಎಂದು. ನಾವದನ್ನು ಗುರುತಿಸಬೇಕಷ್ಟೆ. ಇವತ್ತಿನ ನನ್ನ ಅನುಭವಕ್ಕೆ ಹಿಂದೆ ಎಂದೋ ಆದ ಘಟನೆಯೊಂದು ಹೆಚ್ಚಿನ ಅರ್ಥ ನೀಡಬಹುದು. ಅಂತೆಯೇ, ಇಂದಿನ ಘಟನೆಗಳು, ಅತ್ಯಂತ ಸಾಮಾನ್ಯವೆನಿಸಿದರೂ, ಮುಂದೆಂದೋ ಆಗಬಹುದಾದ ಘಟನೆಗಳಿಗೆ ಕೊಂಡಿ ಆಗಬಹುದು. ಹೀಗೆ ಆಲೋಚಿಸುವಾಗ, ಬದುಕಿನ ಪ್ರತಿಕ್ಷಣವನ್ನೂ ಪ್ರಜ್ಞಾಪೂರ್ವಕವಾಗಿ ಆನಂದದಿಂದ ಅನುಭವಿಸುವ ದೃಷ್ಟಿಕೋನ ಉಂಟಾಗುತ್ತದೆ. ಈ ನನ್ನ ಅನಿಸಿಕೆಗೆ ಪೂರಕವಾದ ಒಂದು ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

ಸುಮಾರು ಆರೆಂಟು ವರ್ಷಗಳ ಹಿಂದೆ ನಾನು ಶಾಲಾ ಪ್ರಾಂಶುಪಾಲೆಯಾಗಿ ಕಾರ್ಯ ನಿರ್ವಹಣೆ ಮಾಡುತ್ತಿದ್ದಾಗ ೧೦ ನೇ ತರಗತಿ ಸಿಬಿಎಸ್ಸಿ ವಿಭಾಗದ ಆಂಗ್ಲ ಪಠ್ಯ ಪುಸ್ತಕವನ್ನು ನನ್ನ ಕೊಠಡಿಗೆ ತರಿಸಿಕೊಂಡೆ. ವಿವಿಧ ತರಗತಿಯ ಮಕ್ಕಳು ಬೇರೆ ಬೇರೆ ವಿಷಯಗಳಲ್ಲಿ ಏನೇನು ಕಲಿಯುತ್ತಿದ್ದಾರೆ ಎನ್ನುವ ಅರಿವಿರಬೇಕೆಂದು ನನ್ನ ಅಭಿಮತ. ಸರಿ, ಪುಸ್ತಕದಲ್ಲಿನ ಪಠ್ಯವನ್ನು ಗಮನಿಸುವಾಗ 'Two gentlemen of Verona' ಎನ್ನುವ ಪಾಠ ಮನ ಸೆಳೆಯಿತು. ಅದೊಂದು ಸುಂದರ ಕಥೆ. ವೆರೋನಾ ಎಂಬ ಊರಿನ ಹನ್ನೆರಡು ಹದಿಮೂರು ವಯಸ್ಸಿನ ಸಹೋದರರಿಬ್ಬರು ವಯಸ್ಸಿಗೆ ಮೀರಿ ಬದುಕಿನಲ್ಲಿ ಕಷ್ಟಗಳನ್ನೆದುರಿಸಿದರೂ ನಿಷ್ಠೆ, ಮಾನವೀಯತೆ ಮರೆಯದೆ ಕರ್ತವ್ಯ ನಿರ್ವಹಣೆ ಮಾಡುವುದನ್ನು ಕಂಡು ಮಕ್ಕಳು ಮುಂದಿನ ಸಮಾಜದ ಆಶಾ ಕಿರಣಗಳಾಗಿ ಕಂಡುಬಂದು ಲೇಖಕರು ಅವರನ್ನು, ಚಿಕ್ಕ ಹುಡುಗರಾಗಿದ್ದಾಗ್ಯೂ, gentlemen of Verona ಅಂತ ಕರೆಯುತ್ತಾರೆ. ಅದೇಕೋ ಆ ಕಥೆ ಗಾಢ ನೆನಪಾಗಿ ನನ್ನ ಮನದಲ್ಲುಳಿಯಿತು. ಮುಂದೊಂದು ದಿನ ನನ್ನ ಬದುಕಿನಲ್ಲಾಗಬಹುದಾದ ಘಟನೆಯೊಂದಕ್ಕೆ ಇದು ಸಂಬಂಧಪಡಬಹುದು ಅಂತ ಆಗ ಊಹಿಸುವುದೂ ಅಸಾಧ್ಯವೇ ಸರಿ.

ಅದಾದ ಒಂದೆರಡು ವರ್ಷಗಳ ನಂತರ ನನ್ನ ತಂಗಿ ಹಾಗೂ ಆಕೆಯ ಗಂಡನ ಜೊತೆ ಜರ್ಮನಿಗೆ ಹೋದೆ. ಅಲ್ಲಿ ನ್ಯೂರನ್ ಬರ್ಗ್ ಎಂಬ ಊರಿನಲ್ಲಿ ಅವರ ಮಗ ಸೊಸೆ ಇದ್ದಾರೆ. ಹೋದಾಗ ಎಲ್ಲರಂತೆ ನಾವೂ ಹಲವಾರು ಸ್ಥಳಗಳನ್ನು ನೋಡಿದೆವು. ನಂತರ ನಾವು ಮೂವರೇ ಹಿರಿಯ ನಾಗರಿಕರು ಒಂದು ವಾರದ ಮಟ್ಟಿಗೆ ಇಟಲಿ ಪ್ರವಾಸಕ್ಕೆ ತಯಾರಾದೆವು. ಮಗ ಎಲ್ಲ ಏರ್ಪಾಟುಗಳನ್ನು ಮಾಡಿದ್ದ. ಪ್ರವಾಸದ ಸಂಪೂರ್ಣ ವಿವರವನ್ನು ತಯಾರಿಸಿ ಊರಿಂದೂರಿಗೆ ಟಿಕೆಟ್ಟುಗಳು, ಹೋಟೆಲ್ ಬುಕಿಂಗ್, ನಾವು ನೋಡಬೇಕಾದ ಸ್ಥಳಗಳಿಗೆ ಎಂಟ್ರಿ ಟಿಕೆಟ್ಟುಗಳು ಇತ್ಯಾದಿ ಇತ್ಯಾದಿ ಎಲ್ಲವನ್ನೂ ಕೂಲಂಕುಷವಾಗಿ ಮಾಡಿದ್ದ. ಅಷ್ಟಲ್ಲದೆ ಆ ಸ್ಥಳಗಳನ್ನು ಕಂಪ್ಯೂಟರ್ ನಲ್ಲೂ ತೋರಿಸಿದ್ದ. ನಮಗೆ ಯಾವುದೇ ರೀತಿಯಾದ ತೊಂದರೆಯಾಗಬಾರದೆಂದು ಅವನ ಕಾಳಜಿ. ಹಿಂದಿನ ಬಾರಿ ಜರ್ಮನಿಗೆ ಹೋಗಿದ್ದಾಗಲೂ ನಾವು ಮೂವರೇ ಮೂರು ದಿನಗಳ ಮಟ್ಟಿಗೆ ಬೇರೆ ಊರುಗಳಲ್ಲಿ ಸುತ್ತಾಡಿದ ಅನುಭವ ಇದ್ದುದರಿಂದ ನಮಗೂ ಧೈರ್ಯವಿತ್ತು.

ಪ್ರವಾಸದ ಮೊದಲಾರು ದಿನಗಳನ್ನು ರೋಮ್, ವ್ಯಾಟಿಕನ್ ಸಿಟಿ, ಪೀಸಾ, ಫ್ಲಾರೆನ್ಸ್ ಮುಂತಾದ ಸ್ಥಳಗಳನ್ನೆಲ್ಲಾ ನೋಡಿ ಕಡೆಯ ದಿನ ವೆನಿಸ್ ನಗರ ದರ್ಶನ ಮಾಡಿದೆವು. ರಾತ್ರಿ ಒಂಭತ್ತು ಘಂಟೆಗೆ ಮ್ಯೂನಿಕ್ ಗೆ ಹೋಗಲು ರೈಲಿನಲ್ಲಿ ಬರ್ತ್ ರಿಸರ್ವ್ ಆಗಿತ್ತು. ಮರುದಿನ ಬೆಳಿಗ್ಗೆ ಆರು ಮೂವತ್ತಕ್ಕೆ ತಲುಪಿ ತಕ್ಷಣ ಬೇರೊಂದು ರೈಲಿನಲ್ಲಿ ಎರಡು ಘಂಟೆಗಳ ಪ್ರಯಾಣ ಮಾಡಿ ನಮ್ಮೂರ ಸೇರಬೇಕಿತ್ತು. ಎಲ್ಲದಕ್ಕೂ ಮಗ ರಿಸರ್ವ್ ಮಾಡಿಸಿದ್ದ. ಅಂದು ಇಡೀ ದಿನ ಸುತ್ತಾಡಿ ಸಾಕಷ್ಟು ಆಯಾಸ ಆಗಿತ್ತಾದ್ರಿಂದ ರೈಲಿನಲ್ಲಿ ಸುಖವಾಗಿ ನಿದ್ರಿಸಿ ಪ್ರಯಾಣ ಮಾಡುವ ಕನಸು ಕಾಣಲಾರಂಭಿಸಿದೆವು. ನಾವಿಳಿದುಕೊಂಡಿದ್ದ ಹೋಟೆಲ್ ಅನ್ನು ಖಾಲಿ ಮಾಡಿ ಸಮೀಪದಲ್ಲೇ ಇದ್ದ ರೈಲು ನಿಲ್ದಾಣಕ್ಕೆ ರಾತ್ರಿ ಎಂಟು ಘಂಟೆ ಹೊತ್ತಿಗೇ ಬಂದು ತಲುಪಿದೆವು.

ನಮ್ಮ ರೈಲು ಬರುವ ಪ್ಲಾಟ್ ಫಾರಂ ನಂಬರ್ ಅದೇಕೋ ಫಲಕದಲ್ಲಿ ಸೂಚಿಸಿರಲಿಲ್ಲ. ಬಹುಶಃ ಸ್ವಲ್ಪ ಸಮಯದ ನಂತರ ತೋರಿಸುತ್ತೇನೋ ಅಂದ್ಕೊಂಡ್ರೆ ಬೇರೆಲ್ಲ ರೈಲುಗಳದ್ದು ತೋರಿಸಿದರೂ ನಮ್ಮ ರೈಲು ಬರುವ ಪ್ಲಾಟ್ ಫಾರಂ ನಂಬರ್ ಮಾತ್ರ ಎಷ್ಟು ಹೊತ್ತಾದರೂ ಫಲಕದಲ್ಲಿ ತೋರಿಸಲಿಲ್ಲ. ನಮ್ಮ ಟಿಕೆಟ್ಟಿನಲ್ಲಿ ೧೨ ಅಂತ ಒಂದು ಕಡೆ ಇದ್ದುದನ್ನು ನೋಡಿ ಅದು ಪ್ಲಾಟ್ ಫಾರಂ ನಂಬರ್ ಇರಬಹುದು ಅಂದ್ಕೊಂಡು ನಾನು, ನನ್ನ ತಂಗಿ ಲಗೇಜ್ ತೊಗೊಂಡು ಪ್ಲಾಟ್ ಫಾರಂ ೧೨ ರಲ್ಲಿ ಬೆಂಚಿನ ಮೇಲೆ ಕುಳಿತು ಸುತ್ತಾಮುತ್ತಾ ನೋಡುತ್ತ ಮಾತನಾಡುತ್ತಿದ್ದೆವು. ಹಳಿ ಮೇಲೆ ಬೇರೊಂದು ರೈಲು ನಿಂತಿತ್ತು. ಬಹುಶಃ ಇದು ಹೋದ ನಂತರ ನಮ್ಮ ರೈಲು ಬರಬಹುದು ಅಂದ್ಕೊಂಡು ನೋಡ್ತಾನೇ ಇದ್ವಿ. ತಂಗಿ ಗಂಡ ಅಲ್ಲೇ ಫಲಕದ ಬಳಿಯೇ ಠಳಾಯಿಸ್ತಾ ಇದ್ರು. ಅಷ್ಟರಲ್ಲಾಗಲೇ ೮.೫೦ ಕೂಡಾ ಆಗಿಹೋಯ್ತು. ಇದೇನಪ್ಪಾ, ಈ ರೈಲು ಹೋಗೋದು ಯಾವಾಗ, ನಮ್ಮ ರೈಲು ಬರೋದು ಯಾವಾಗ ಅಂತ ಸ್ವಲ್ಪ ಆತಂಕ ಶುರುವಾಯ್ತು. ೮.೫೫ರ ಹೊತ್ತಿಗೆ ರೈಲು ಹೊರಟಿತು. ಅಲ್ಲೆಲ್ಲಾ ಕರಾರುವಕ್ಕಾಗಿ ಸಮಯ ಪಾಲನೆ ಮಾಡುತ್ತಾರಾದ್ರಿಂದ ಈ ರೈಲು ಹೋಗ್ತಿದ್ದ ಹಾಗೆ ನಮ್ಮ ರೈಲು ಬರುತ್ತೆ ಅಂತ ನಾವು ತಯಾರಾಗಿ ನಿಂತ್ಕೊಂಡು ಬಿಟ್ವಿ. ಈ ರೈಲು ಹೊರಡುತ್ತಿದ್ದ ಹಾಗೆ ಯಾರೋ ತಂದೆ ಮಗ ಓಡೋಡುತ್ತಾ ಬಂದರು. ಅವರ ಬರ್ತ್ ಇದರಲ್ಲಿ ರಿಸರ್ವ್ ಆಗಿತ್ತಂತೆ. ಅಲ್ಲೆಲ್ಲಾ ಒಮ್ಮೆ ರೈಲು ಹೊರಟರೆ ತಕ್ಷಣ ಬಾಗಿಲು ಹಾಕಿಕೊಂಡು ಬಿಡುತ್ತೆ. ಆಗ ಹತ್ತೋದು ಅಸಾಧ್ಯ. ತಂದೆ ಮಗ ಹತ್ತುವ ಮೊದಲೇ ಅದು ಹೋಗಿಯೇ ಬಿಡ್ತು. ಪಾಪ! ಅವರಿಬ್ಬರೂ ಪೆಚ್ಚಾಗಿ ನಿಂತುಬಿಟ್ರು. ನಾನು, ನನ್ನ ತಂಗಿ ಅವರಿಗಾಗಿ ಮರುಗಿದೆವು. ಏನಪ್ಪಾ ಅವರ ಗತಿ ಈಗ ಅಂತೆಲ್ಲಾ ಲೊಚಗುಡ್ತಿದ್ವಿ. ಅಷ್ಟರಲ್ಲಿ ನನ್ನ ತಂಗಿ ಗಂಡ ಓಡ್ಕೊಂಡು ಬಂದು 'ನಮ್ಮ ರೈಲು ಪ್ಲಾಟ್ ಫಾರಂ ನಂಬರ್ ೬ ರಲ್ಲಿ ನಿಂತಿದೆ. ಇನ್ನೇನು ಹೊರಟು ಬಿಡುತ್ತೆ, ಬೇಗ ಬನ್ನಿ' ಎಂದು ಹೇಳಿದರು. ಎದ್ವೋ ಬಿದ್ವೋ ಅಂತ ನಮ್ಮ ನಮ್ಮ ಸೂಟ್ಕೇಸುಗಳನ್ನು ಎಳ್ಕೊಂಡು ಓಡಿ ಓಡಿ ಹೋದ್ವಿ. ಹತ್ತಿರದಲ್ಲೇ ಇತ್ತು ಆರನೇ ಪ್ಲಾಟ್ ಫಾರಂ. ಸಧ್ಯ ಬೇಗ ಹತ್ತಿ ಬಿಡೋಣ ಅಂತ ಹತ್ತಿರ ಹೋಗುವಷ್ಟರಲ್ಲಿ ಬಾಗಿಲುಗಳೆಲ್ಲಾ' ಧಪ್'ಅಂತ ಹಾಕಿಕೊಂಡೇ ಬಿಟ್ವು. ಅದೇ ಕ್ಷಣಕ್ಕೆ ರೈಲು ಕೂಡಾ ಹೊರಟೇ ಬಿಡ್ತು. ಹತ್ತಿರದಲ್ಲಿದ್ದೂ ನಮಗೆ ಹತ್ತಲಾಗಲಿಲ್ಲ. We missed the train! ಪರಸ್ಪರ ಮುಖ ಮುಖ ನೋಡ್ತಾ ನಿಂತ್ವಿ. ನಂಬಲಾಗದ, ದಿಕ್ಕೇ ತೋಚದ ಸ್ಥಿತಿ! ಐದು ನಿಮಿಷಗಳ ಕೆಳಗೆ ಬೇರೊಬ್ಬರಿಗಾದ ಸ್ಥಿತಿ ಈಗ ನಮಗೇ ಬಂದಿತ್ತು. ಮುಂದೇನು?

....ಮುಂದುವರೆಯುವುದು

ಶೀಲಾ ಅರಕಲಗೂಡು

ದೇವನಲ್ಲಿ ಪ್ರಶ್ನೆ

"ಏನು ನಿಮ್ಮ ಹೆಸರು ?"
"ಜಾನಕಮ್ಮ"
ನೋಡಿಯಮ್ಮ ನಮ್ಮ ಆಶ್ರಮದಲ್ಲಿ ಸೇರ ಬೇಕಾದರೆ ಒಂದಿಷ್ಟು ನಿಯಮಗಳಿವೆ ನೀವು ಅದನ್ನು ಪಾಲಿಸಲೇಬೇಕು .

"ಇಲ್ಲಿಗೆ ಒಮ್ಮೆ ಬಂದ ಮೇಲೆ ಎಲ್ಲೂ ಹೊರಗೆ ಹೋಗುವಂತಿಲ್ಲ ,ಕಂಡದ್ದನ್ನೇಲ್ಲ ಕೊಂಡು ಕೊಳ್ಳುವಂತಿಲ್ಲ."
"ಅಯ್ಯೋ ಹಾಗೆಂದರೆ ಹೇಗೆ ಸರ್ , ನಾನು ಕೆಲಸ ಮಾಡುತ್ತಿರುವ ಮನೆಯವರು ನನ್ನನು ಹೊರಗೆ ಹಾಕಿ , ಮನೆಗೆ ಬೀಗ ಹಾಕಿ ಮತ್ತೆ ಬರುತ್ತೆವೆಂದು ಎಲ್ಲೊ ಹೋದರು , ನಾನು ಲಾಗಾಯ್ತಿನಿಂದ ಆ ಮನೆಯಲ್ಲಿ ಕೆಲಸಕ್ಕೆ ಇದ್ದೆ.ಅವರೇ ನನ್ನ ಸರ್ವಸ್ವ ಅಂದು ಕೊಂಡಿದ್ದೆ. ಮತ್ತೆ ಅವರು ಬಂದ ಮೇಲೆ ಒಮ್ಮೆ ಕೇಳಲು ಹೋಗುವುದು ಬೇಡವೇ ? "

"ಇಲ್ಲಾ, ನಮಲ್ಲಿ ಯಾರು ಇಲ್ಲದ , ಯಾವ ಸಹಾಯವಿಲ್ಲದವರನ್ನೇ ಸೇರಿಸಿ ಕೊಳ್ಳುವುದು, ಹಾಗೆಲ್ಲೂ ಹೊರಗೆ ಹೋಗಲು ಅನುಮತಿ ಇಲ್ಲ ."

"ನಿಮ್ಮ ಹತ್ತಿರ ಬೆಲೆ ಬಾಳುವ ಒಡವೆ ವಸ್ತ್ರ ಇಟ್ಟು ಕೊಳ್ಳುವಂತಿಲ್ಲ .ಇತರ ಸಹಪಾಠಿಗಳಿಗೆ ಅದರಿಂದ ನೋವುಂಟಾಗ ಬಾರದು, ಅದರ ಆಸೆಯಲ್ಲಿ ಕಳ್ಳತನದಂತಹ ಕೆಟ್ಟ ಕೆಲಸಕ್ಕೆ ಆಸ್ಪದ ಇರಬಾರದು."

"ಅಯ್ಯೋ !! ನನ್ನ ಹತ್ತಿರ ಸ್ವಲ್ಪ ಹಣ ಇದೆ, ಅದನ್ನು ಇಟ್ಟುಕೊಳ್ಳುವಂತಿಲ್ಲವೇ ?"
"ಉಹೂ.... ಇಲ್ಲ . ಹಣ ಇಟ್ಟುಕೊಂಡು ಕಂಡದ್ದು ತರಿಸಿಕೊಂಡು ತಿಂದರೆ , ನಿಮ್ಮ ಅರೋಗ್ಯ ಹಾಳಾಗುತ್ತದೆ. ಮತ್ತೆ ಜೊತೆಗೆ ಇರುವವರಿಗೆ ಬೇಜಾರು ಆಗುತ್ತೆ ನಮಗಿಲ್ಲವೆಂದು ." ಇಲ್ಲಿ ನಾವೆಲ್ಲ ನಿಮಗೆ ರುಚಿ, ಶುಚಿಯಾದ, ದಿನಕ್ಕೊಂದು ಬಗೆಯ, ನಿಮ್ಮ ಆರೋಗ್ಯಕ್ಕೆ ಪೂರಕವಾದ ಆಹಾರವನ್ನೇ ಕೊಡುತ್ತೆವೇ." ಅದಕ್ಕಾಗಿ ನೀವು ಒಂದು ಕಾಸು ಕೊಡಬೇಕಿಲ್ಲ"

ಹೌದು, ಓಂಕಾರ ಫೌಂಡೇಶನ್ ನೆಡಸುತ್ತಿರುವ ವೃದ್ದಾಶ್ರಮ ಸಂಪೂರ್ಣ ಉಚಿತ , ತುಂಬಾ ವ್ಯವಸ್ಥಿವಾಗಿ ಇದೆ. ಐ ಟಿ ಕಂಪನಿಯಲ್ಲಿ ತಮ್ಮ ಸಾಮರ್ಥ್ಯದಿಂದ ಹಗಲು ರಾತ್ರಿ ದುಡಿದು ವಿಶ್ರಾಂತರಾದ ನಾಲ್ಕೈಯ್ದು ಜನ . ಉದಾರ ಮನಸ್ಸಿನ , ಸಮಾಜಕ್ಕೆ ಏನನ್ನಾದರೂ ಹೆಚ್ಚಿನದನ್ನು ಕೊಡಬೇಕೆಂಬ ,ಕೊಡುಗೈ ಜೀವಿಗಳ ಮನಸ್ಸಿನಿಂದ ಅರಳಿದ ಕುಸುಮವಿದು "ವಾನಪ್ರಸ್ಥಾಶ್ರಮ".

" ನಿಮ್ಮ ಹತ್ತಿರ ಎಷ್ಟು ಹಣ ಇದೆ, ಅದನ್ನು ಅಲ್ಲಿ ಆಫೀಸಿನಲ್ಲಿ ಜಮಾ ಮಾಡಿ , ನಿಮ್ಮ ಹತ್ತಿರ ಪೈಸೆ ಕೂಡ ಇಟ್ಟುಕೊಳ್ಳುವಂತಿಲ್ಲ"

" ಇಲ್ಲ ಸರ್ , ತಕ್ಷಣ ಹೀಗೆಂದರೆ ಹೇಗೆ ? ನನಗೇನಾದರೂ ಬೇಕಾದರೆ ?"

"ವರ್ಷಕೊಮ್ಮೆ ನಾನು , ನಮ್ಮ ಮನೆಯ ದೇವರಿಗೆ ಹೋಗಬೇಕು , ನನ್ನ ಯಜಮಾನರ ತಿಥಿ ಮಾಡಬೇಕು.

"ಹಾಗೆಲ್ಲ ಮಾಡುವಂತಿಲ್ಲ. ನಿಮಗೆ ಇಲ್ಲಿ ಎಲ್ಲ ಚೆನ್ನಾಗಿ ವ್ಯವಸ್ಥೆ ಇದೆ . ಆದರೆ ನಿಮಗೆ ತಿಳಿದಂತೆ ಎಲ್ಲೆಂದರಲ್ಲಿ ಹೋಗುವಂತಿಲ್ಲ, ಏನು ಬೇಕೋ ಮಾಡುವಂತಿಲ್ಲ "

"ಒಮ್ಮೆಲೇ ಹೀಗಂದರೆ ಹೇಗೆ ? ನನಗೂ ಹೊಂದಿಕೊಳ್ಳಲು ಸಮಯ ಬೇಕಾಗುತ್ತೆ. ನನ್ನವೂ ಕೆಲವು ವಿಚಾರಗಳಿವೆ ....
ಹೀಗೆ ಸಾಲು , ಸಾಲು ಪ್ರಶ್ನೋತ್ತರ, ಹೊಸದಾಗಿ ವೃದಾಶ್ರಮಕ್ಕೆ ಸೇರಲು ಬಂದ ಜಾನಕಮ್ಮ ಮತ್ತು ಇದನ್ನು ನೆಡೆಸುತ್ತಿರುವ ದಾನಿಗಳಲ್ಲಿ ಒಬ್ಬರಾದ ಶ್ರೀಯುತ ಕೃಷ್ಣರಾವ್ ನಡುವೆ ನೆಡದಿತ್ತು.

ಕೃಷ್ಣರಾವ್, ನನಗೆ ಪರಿಚಿತರು ಹಾಗು ಅವರ ದಾನ ಧರ್ಮದ , ನಿಸ್ವಾರ್ಥ ಸೇವೆಯ ಗುಣ ನನ್ನಲ್ಲಿ ಅವರ ಬಗೆಗೆ ಅಪಾರ ಗೌರವ ತಂದಿದೆ.

ಜಾನಕಮ್ಮ ಒಂದು ಫಾರಂನಲ್ಲಿ ತಮ್ಮ ವಿವರ ತುಂಬುತ್ತಿದ್ದಾರೆ , ಅವರು ವಿದ್ಯಾವಂತರು , ಎಲ್ಲ ವಿವರ ನೀಟಾಗಿ ತುಂಬುತ್ತಿದ್ದರು ಪ್ರತಿ ವಿವರಣೆಯ ಬಗೆಗೆ ಅವರ ಮನಸ್ಸಿನಲ್ಲಿ ನೂರಾರು ಪ್ರಶ್ನೆಗಳು.   ಪಾಪ .... ಅವರಿಗೆ ಆಶ್ರಮಕ್ಕೆ ಸೇರುವ ಮನಸ್ಸಿಲ್ಲ ಅನ್ನಿಸುತ್ತದೆ. ಅಥವಾ ಇಂತಹ ಕಟ್ಟು ಕಟ್ಟಳೆಯ ನಡುವೆ ಬದುಕಲು ಅವರ ಮನಸ್ಸು ತಯಾರುಗೊಂಡಿಲ್ಲ.   ಅವರೆಲ್ಲಾ ಪ್ರೆಶ್ನೆಗಳಿಗೆ ಕೃಷ್ಣರಾವ್ ಅವರದು ಕಟ್ಟು ನಿಟ್ಟಿನ ಉತ್ತರ .

ಅಷ್ಟರಲ್ಲಿ ಆಶ್ರಮ ವಾಸಿಗಳಿಗೆ , ಆಫೀಸ್ನಲ್ಲಿರುವವರಿಗೆ ನಮ್ಮಂತೆ ನೋಡಲು ಬಂದವರಿಗೆ ಕಾಫಿಯ ಸರಬರಾಜು, ಅದೂ ಮನೆಯವರಂತೆ ಆಶ್ರಮ ವಾಸಿಗಳಿಂದಲೇ. ಹೌದು "ವಾನಪ್ರಸ್ಥ" ಅವರ ಸ್ವಂತ ಮನೆಯೇ .   ಕಾಫಿ ಬೇಡವೆಂದ ನಮಗೆಲ್ಲ ಅವರಿಂದ ಒತ್ತಾಯದ ಆತಿಥ್ಯ, ಅದೂ ಆಶ್ರಮ ವಾಸಿಗಳಿಂದಲೇ

ಜಾನಕಮ್ಮನವರನ್ನು ಎಲ್ಲರೊಂದಿಗೆ ಕಾಫಿ ಕುಡಿಯಲು ಕಳಿಸಿದ್ದಾಯ್ತು.

"ಸರ್ , ಅವರಿಗೆ ಆಶ್ರಮ ಸೇರುವ ,ಮಾನಸಿಕ ತಯಾರಿ ಇದ್ದಂತಿಲ್ಲ, ಅವರನ್ಯಾಕೆ ಸೇರಿಸಿ ಕೊಳ್ಳುತ್ತೀರಿ? ಇಂತವರಿಂದ ಆಶ್ರಮದ ಶಿಸ್ತು , ರೀತಿ ರಿವಾಜು ಪಾಲಿಸಲು ಆಗುತ್ತದೆಯೇ ? "

" ಇಲ್ಲ ಮೇಡಂ , ಬಂದಾಗ ಎಲ್ಲ ಹೀಗೆ ಇರುತ್ತಾರೆ , ನಾಲ್ಕೈದು ದಿನದ ನಂತರ ಸರಿ ಹೋಗುತ್ತಾರೆ ."
" ನನಗೇನೋ ಹಾಗೆ ಅನ್ನಿಸುವುದಿಲ್ಲಪ್ಪ"

" ಪಾಪ .... ಈಗ ನಾವು ಸೇರಿಸ್ಕೊಳ್ಳದಿದ್ದರೆ ಅವರು ಎಲ್ಲಿಗೆ ಹೋಗುತ್ತಾರೆ ?"

" ಅವರಿಗೆ ಹಾಗೆ ಶಿಸ್ತಿನ ಪ್ರಶ್ನೆ ಹಾಕಿದರೂ , ಮತ್ತೆ ನಾವೇ ಅವರೊಂದಿಗೆ ಹೊಂದಿಕೊಳ್ಳಬೇಕು, ಪ್ರೀತಿ, ಆತ್ಮೀಯತೆ ತೋರಿಸ ಬೇಕು . ಪಾಪ ಯಾವ ಸಂಭಂದಗಳು ಇಲ್ಲಾಂತ, ನಮ್ಮಲ್ಲಿ ಆಶ್ರಯ ಕೇಳಿ ಬಂದಿರುತ್ತಾರೆ. ಅವರಿಗೆ ಸಾಂತ್ವನ, ಸಹಾಯ ಮಾಡುವುದು ನಮ್ಮ ಧರ್ಮ "

ಅವರ ಮಾತು ಕೇಳಿ , ಅವಾಕ್ಕಾಗುವ ಸರದಿ ನನ್ನದಾಯ್ತು.

ಅಷ್ಟೋತ್ತು ಜಾನಕಮ್ಮನೊಂದಿಗೆ ಗತ್ತಿನಿಂದ ಮಾತನಾಡಿದ ಕೃಷ್ಣರಾವ್ ಇವರೇನಾ ?

ನಾನು ಯೋಚಿಸುವಷ್ಟರಲ್ಲಿ , ರಾವ್ ಹಜಾರದಲ್ಲಿರುವ ಜಾನಕಮ್ಮನ ಎರಡು ಬ್ಯಾಗುಗಳನ್ನು ತಾವೇ ಹೊತ್ತುಕೊಂಡು ಕಾಫಿ ಕುಡಿಯುವ ಜಾನಕಮ್ಮನ ಹತ್ತಿರ ಬಂದಾಗಿತ್ತು.

" ಬನ್ನಿ , ಬನ್ನಿ ನಿಮ್ಮ ಮಂಚ ಮತ್ತು ನಿಮ್ಮ ಸಾಮಾನು ಇಡುವ ಕಪಾಟನ್ನು ತೋರಿಸುತ್ತೇನೆ . ಇಷ್ಟು ಸಾಮಾನು ಇಟ್ಟುಕೊಳ್ಳಬಾರದು , ಸ್ವಲ್ಪ ಕಡಿಮೆ ಮಾಡಿ , ನಿಮಗೆ ಕೊಡುವುದು ಒಂದೇ ಕಪಾಟು ತಿಳಿತಾ ?"

ನನ್ನಕಡೆ ನೋಡುತ್ತಾ " ಬನ್ನಿ ಮೇಡಂ ಆಶ್ರಮ ತೋರಿಸುತ್ತೇನೆ"

" ಇದರ ಮಹಾದಾನಿಗಳು ಇವರೇನಾ ?" ನನ್ನ ಮನಸ್ಸು ಅವರಲ್ಲಿರುವ ಮನುಷ್ಯತ್ವದ ಬಗೆಗೆ ತುಂಬಿ ಬಂದಿತ್ತು. ಬ್ಯಾಗನ್ನು ಕೆಳಗಿಟ್ಟ ಕೃಷ್ಣರಾವ್ " ಬನ್ನಿ ಜಾನಕಮ್ಮ ಇದು ನಿಮ್ಮ ಮಂಚ ಕಪಾಟು . ಇಂದಿನಿಂದ ಇದು ನಿಮ್ಮ ಮನೆ "

ಒಂದು ಪೈಸೆಯನ್ನು ಖರ್ಚುಮಾಡದ ಜಾನಕಮ್ಮನಿಗೆ ನೀಟಾಗಿ ಇರುವಂತಹ ಮಂಚ , ಹಾಸಿಗೆ , ದಿಂಬು , ಚಿತ್ರದ ಹೊದಿಕೆಯೊಂದಿಗೆ ಲಭಿಸಿದವು . ಅವರಿಗೆ ಅವರ ಜೀವಿತದ ಕೊನೆಯವರೆಗೂ ಅನುಮಾನವಿಲ್ಲದ ಆಶ್ರಯ ದೊರೆತಾಗಿತ್ತು.

" ನೋಡಿ ಈ ಸಾಲಾಗಿ ನಾಲ್ಕು ರೂಮ್ಗಳು ಹಾಗೆ ಇಟ್ಟಿರುವೆವು"
"ಯಾಕೆ?"
"ಅವರಲ್ಲಿ ಯಾರಿಗಾದರೂ ಹುಶಾರಿಲ್ಲದಿದ್ದರೆ , ಜ್ವರ ಉರಿ ಬಂದು ಬೇರೆಯವರಿಗೆ ತಗಲ ಬಾರದೆಂದು ಅವರನ್ನು ಪ್ರತ್ಯೇಕವಾಗಿ ಇಡಲು ೨ ಕೊಠಡಿಗಳು "
"ಇನ್ನೆರಡು ?"
"ಸುಮಾರು ವರ್ಷವಾಯ್ತು ಈ ಆಶ್ರಮ ನಡೆಸುತ್ತಾ .
ಎಷ್ಟೋ ಜನ ಕಾಲವಾಗಿದ್ದಾರೆ"
ದೀರ್ಘ ಉಸಿರೆಳೆದರು ಕೃಷ್ಣರಾವ್ .
" ಕೊನೆಯ ದಿನ ಬಂದಾಗ , ಬೇರೆಯ ಸಹಪಾಠಿಗಳಿಗೆ ದುಃಖವಾಗ ಬಾರದಲ್ಲವೇ ?ಅವರನ್ನ ಈ ಕಡೆ ಇರುವ ರೂಮ್ನಲ್ಲಿಇಟ್ಟು, ಇಪ್ಪತ್ನಾಲ್ಕು ಗಂಟೆ ಸರದಿಯಲ್ಲಿ ನಾವು ಟ್ರಸ್ಟಿಗಳು ಒಬ್ಬರಲ್ಲ ಇನ್ನೊಬ್ಬರು ಇದ್ದು ತುಂಬಾ ಕಾಳಜಿಯಿಂದ ನೋಡಿ ಕೊಳ್ಳುತ್ತೇವೆ. ಅವರ ಅಂತಿಮ ದಿನಗಳು ಅನಾಥರಗಳಿಂದ ಕಳೆಯ ಬಾರದಲ್ಲವೇ? ಇತರರಿಗೂ ಒಂದು ಸಾಂತ್ವನ, ಅವರ ಆಶ್ರಮದ ಬಗೆಗೆ ನಂಬಿಕೆ "
ಕೊನೆಯ ದಿನಗಳ ಪರಿಕಲ್ಪನೆ ಯಾರನ್ನೂ ಒಂದು ನಿಮಿಷ ಅಧೀರರನ್ನಾಗಿಸುತ್ತದೆ . ಈ ದಾನಶೀರೋಮಣಿಗಳು ಅದನ್ನು ಧೈರ್ಯದಿಂದ ಬರಮಾಡಿ ಕೊಳ್ಳುವಂತೆ ಮಾಡಿರುವ ವ್ಯವಸ್ಥೆ ಬೆಲೆ ಕಟ್ಟಲಾರದಂತಹುದು . ಇಂತಹ ಸಂಸ್ಥೆ ನಡೆಸುವ ಜವಾಬ್ದಾರಿಯ ಆಳ, ಅಗಲ ನನ್ನರುಹಿಗೆ ಬಂದಿತು ! ಬರಿ ದಾನ ಮಾಡಿದರೆ ಸಾಲದು ಅದನ್ನು ಕೊನೆಯವರೆಗೆ ಕೊಂಡೊಯ್ಯುವ ಪರಿ ಬಹಳ ಕಷ್ಟದಾಯಕ.
ಮೂರಂತಸ್ತಿನ ಭವ್ಯ ಕಟ್ಟಡ, ನೆಲ ಮಹಡಿಯಲ್ಲಿ ಸುಸಜ್ಜಿತ ಅಡುಗೆ ಮನೆ , ಊಟದ ಮನೆ ನಂತರ ವರಾಂಡದಲ್ಲಿ ಟಿ ವಿ ಸೋಫಾಗಳು, ನಂತರ ಬಲಗಡೆ ಸಾಮೂಹಿಕ ಪ್ರಾರ್ಥನೆ ಮಾಡಲು ಹಜಾರ , ಮೂಲೆಯಲ್ಲಿ ಆಫೀಸ್ ರೂಂ. ಈ ಹಿರಿಯರಿಗೆ ಹಾಲ್ನಲ್ಲಿ ಪೂಜೆ ಸಲ್ಲಿಸಲು ಗಣಪತಿಯ ವಿಗ್ರಹದೊಂದಿಗೆ ಮಂಟಪ. ಉಳಿದ ವೇಳೆಯಲ್ಲಿ ಹಿರಿಯರು ಕುಳಿತು ಮಾತನಾಡಲು , ಹತ್ತಿ ಬತ್ತಿಯಂತಹ ಅವರ ಹವ್ಯಾಸ ಮಾಡಲು,ಹೆಣಿಕೆ, ಹೊಲಿಗೆ ಮಾಡಲು . ಅವರಿಗೆ ಸಮಯ ಕಳೆಯುವಂತಹ ಚಟುವಟಿಕೆಯ ಕೇಂದ್ರ.

ಹೀಗೆ ಒಂದೊಂದೇ ಅವರು ತೋರಿಸುತ್ತ ಹೋಗುತ್ತಿದ್ದರೆ ಜಾನಕಮ್ಮ ನನ್ನ ಮನ ಅವರಸಿಕೊಂಡಿದ್ದರು. ನನಗೆ ಬಲವಾದ ನಂಬಿಕೆ, ಅವರಿಗೆ ಇಲ್ಲಿರಲು ಮನಸ್ಸಿಲ್ಲ. ಅವರು ಇಲ್ಲಿ ಹೊಂದಿಕೊಳ್ಳಲಾರರು. ಅವರಲ್ಲಿ ನೂರೆಂಟು ಪ್ರಶ್ನೆಗಳಿವೆ.
ಹೌದು ಈ ಆಶ್ರಮ ಪೂರ್ತಿ ಉಚಿತ , ಆದರೆ ವ್ಯವಸ್ಥೆ, ಆತ್ಮೀಯತೆ ಲಕ್ಷ ಲಕ್ಷ ಹಣ ಕೊಟ್ಟ ಆಶ್ರಮದಲ್ಲಿ ಸಿಗುವುದಿಲ್ಲ , ಎಲ್ಲ ಸರಿ,
ಉಚಿತವಾಗಿ ಸಿಕ್ಕರೂ ಪ್ರಶ್ನಿಸಲು , ಅಸೆ ಆಕಾಂಕ್ಷೆ ಹೊಂದಲು ಪ್ರತಿಯೊಬ್ಬರಿಗೂ ಅವಕಾಶವಿದೆಯಲ್ಲವಾ?
ಎಲ್ಲರಿಗೂ ಅವರದೇ ಮನೆ ಇದ್ದರೆ ಚೆಂದವಲ್ಲವಾ ?
ಮನುಷ್ಯನಿಗೆ ಅವನದೇ ಸಂತಾನ , ಅದರ ಆಸರೆ ಕೊಡಲೇ ಬೇಕು ದೇವರು .
ಕೆಲವರನ್ನು ಇಂತಹ ಜೀವನ ಕ್ರಮದಿಂದ ದೂರವಿರಿಸಿ ವಂಚಿಸುತ್ತಾನೇಕೆ?
ಮಹಾ ದೇವಾ ನನ್ನೀ ಪ್ರಶ್ನೆಗೆ ನೀನು ಉತ್ತರಿಸಲೇ ಬೇಕು .

ರೇಣುಕಾ ದೇಸಾಯಿ